
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2015
ಬೆಲೆ ರೂ. 1



## ಮರೆಯಾದ ಮಹಾತಾಯಿ

# ಸರೋಜಿನಿ ಮಹಿಷಿ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 5
ಫೆಬ್ರವರಿ 2015, ಬೆಲೆ ರೂ. 1


## ನೇರ ಮಾತು

ಅಖಂಡ ಕರ್ನಾಟಕದ ಕಲ್ಪನೆಯ ಜೊತೆಗೆ ಕನ್ನಡದ ಅಳಿವು ಉಳಿವುಗಳ ಬಗ್ಗೆ ವಿಶೇಷ ಕಾಳಜಿ ಹಾಗೂ ಶ್ರಮ ವಹಿಸಿದವರು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು. ಅವರು ಬಹಳ ಕಾಲದಿಂದ ಅಧ್ಯಕ್ಷರಾಗಿರುವ ಧಾರವಾಡದ ವಿದ್ಯಾವರ್ಧಕ ಸಂಘವು ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜತೆ ಸೇರಿ ದೆಹಲಿಯಲ್ಲಿ ಇದೇ ಜನವರಿ 24 ಮತ್ತು 25ರಂದು ಎರಡು ದಿನಗಳ ಹೊರನಾಡ ಕನ್ನಡಿಗರ ಮಹಾಮೇಳವನ್ನು ನಡೆಸಿದಾಗ ಎಲ್ಲ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನವನ್ನು ಅವರು ಮಾಡುತ್ತಿದ್ದರು. ಕನ್ನಡದ ನಾಡಿಮಿಡಿತವಾಗಿರುವ ಅವರು ನಮಗೆ ಮಾತ್ರವಲ್ಲ ಕರ್ನಾಟಕದಾಚೆ ಹೊರನಾಡಿನಲ್ಲಿ ಕನ್ನಡದ ಕೆಲಸ ಮಾಡುವವರಿಗೆಲ್ಲಾ ಪ್ರೇರಣಾಶಕ್ತಿಯಾಗಿ ಕಂಡು ಬಂದರು.

ಹಿಂದೊಮ್ಮೆ ರಾಜ್ಯಸಭಾ ಸದಸ್ಯರಾಗಿದ್ದ ಅವರು ದೆಹಲಿಯಲ್ಲಿದ್ದವರು. ಜತೆಗೆ ಪತ್ರಿಕೋದ್ಯಮದ ಅಪಾರ ಅನುಭವ ಹೊಂದಿರುವ ಹಾಗೂ ಕನ್ನಡ ಹೋರಾಟಗಳನ್ನು ಮಾಡಿದ ಅವರು ನಾಡಿನ ಬಗ್ಗೆ ಇನ್ನಷ್ಟು ಯೋಚಿಸುವಂತೆ ನಮ್ಮನ್ನು ಹುರಿದುಂಬಿಸಿದರು.

ಪಾಟೀಲ ಪುಟ್ಟಪ್ಪನವರನ್ನು ಪ್ರೀತಿ ಮತ್ತು ಗೌರವದಿಂದ ನೋಡಿಕೊಂಡ ಹೆಮ್ಮೆ ದೆಹಲಿ ಕರ್ನಾಟಕ ಸಂಘದ ಒಡನಾಡಿಗಳಿಗೆ ಬಹಳ ದಿನ ನೆನಪಿನಲ್ಲಿ ಉಳಿಯುವಂತಹದ್ದು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಶಂಕರ ಹಲಗತ್ತಿ ಮತ್ತು ಅವರ ತಂಡ ಡಾ. ಪಾಟೀಲ ಪುಟ್ಟಪ್ಪನವರ ಮಾರ್ಗದರ್ಶನದಲ್ಲಿ ದೆಹಲಿಯಂತಹ ಮಹಾನಗರದಲ್ಲಿ ದೇಶದ ಮೂಲೆಮೂಲೆಗಳಿಂದ ಕನ್ನಡಿಗರನ್ನು ಒಗ್ಗೂಡಿಸಿ ಪರಸ್ಪರ ಚರ್ಚೆ ಮತ್ತು ಸಂವಾದವನ್ನು ನಡೆಸಿದುದು ಕನ್ನಡವು ಹೊರನಾಡಿನಲ್ಲಿ ಜೀವಂತವಾಗಿ ಉಳಿಯುವಂತೆ ಮಾಡಿದೆ.

ಸಂಘದಲ್ಲಿ ಜನವರಿ 17 ಮತ್ತು 18 ರಂದು ನಡೆದ ಕರ್ನಾಟಕ ಸಾಧಕಿಯರ ಉತ್ಸವದಲ್ಲಿ ಕನ್ನಡದ ಶ್ರೇಷ್ಠ ಮತ್ತು ಹಿರಿಯ ಗಾಯಕಿಯರಾದ ಅನುರಾಧಾ ಧಾರೇಶ್ವರ, ಕಸ್ತೂರಿ ಶಂಕರ್, ಬಿ.ಕೆ.ಸುಮಿತ್ರ, ನಾಡೋಜ ಬಿ.ಜಯಶ್ರೀ, ಸಂಗೀತ ಕಟ್ಟಿ ಕುಲಕರ್ಣಿ ಮತ್ತು ನೃತ್ಯಗಾರ್ತಿಯರಾದ ಪ್ರತಿಭಾ ಪ್ರಹ್ಲಾದ್, ರಾಧಾಭಾಯಿ, ಗುರು ಭಾನುಮತಿ ಅವರ ನೃತ್ಯ ನಿರ್ದೇಶನ ಸಮೂಹ ನೃತ್ಯ ತಂಡದವರು ಪಾಲ್ಗೊಂಡು ಎಲ್ಲ ಹಿರಿಯ ಕಲಾವಿದರು ದೆಹಲಿ ಕನ್ನಡಿಗರ ಜೊತೆಗೆ ತಮ್ಮ ಮನೆಮಂದಿಯಂತೆ ಬೆರೆತಿರುವುದು ನಮಗೆಲ್ಲ ಒಂದು ರೀತಿಯ ಬೆರಗನ್ನುಂಟು ಮಾಡಿದೆ. ಇಂತಹ ಪ್ರತಿಭಾನ್ವಿತರ ಸಾಧನೆಗಳು ಇಂದಿನ ಯುವಪೀಳಿಗೆಗೆ ಪ್ರೇರಣೆಯಾಗಲಿದೆ.

ಕೇಂದ್ರದ ಮಾಜಿ ಸಚಿವೆ ಡಾ. ಸರೋಜಿನಿ ಮಹಿಷಿಯವರು 1966 ರಿಂದ 1983ರವರೆಗೆ ದೀರ್ಘಾವಧಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ದುಡಿದವರು. ಈಗ ಭವ್ಯವಾಗಿ ನೆಲೆ ನಿಂತಿರುವ ಸಂಘಕ್ಕೆ ಭೂಮಿಯನ್ನು ಕೊಡಿಸಿದ ಕೀರ್ತಿ ಅವರದ್ದು. ಡಾ. ಮಹಿಷಿಯವರು ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕ ರಾಜ್ಯ ಮತ್ತು ನಮ್ಮ ದೇಶಕ್ಕೆ ನೀಡಿದ ಸೇವೆ ಅಪಾರ. ಹಲವಾರು ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದಿದ್ದ ಅವರು ಹಿಂದಿ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಅವರ ಅಗಲಿಕೆ ಕನ್ನಡಿಗರಿಗೆ ಅಪಾರ ದುಃಖವನ್ನು ನೀಡಿದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಹೊರನಾಡ ಕನ್ನಡ ಸಂಘಗಳ ಪ್ರತಿನಿಧಿಗಳ ಮಹಾಮೇಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಮಹಾಮೇಳದ ಎರಡನೇ ದಿನದ ಕಾರ್ಯಕ್ರಮದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷೆ ಡಾ.ಸರೋಜಿನಿ ಮಹಿಷಿ ಇನ್ನಿಲ್ಲ ಎಂಬ ಆಘಾತಕಾರಿ ಸುದ್ದಿ ಬಂತು.

ನಾಡೋಜ ಪಾಟೀಲ ಪುಟ್ಟಪ್ಪ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕನ್ನಡಿಗರಿಗೆ ಈ ಸುದ್ದಿಯನ್ನು ಅರಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸಂಘ ಇರುವ ಈ ಜಾಗ ದೊರೆಯಲು ಹಾಗೂ ಹಳೆಯ ಕಟ್ಟಡದ ನಿರ್ಮಾಣಕ್ಕೆ ಕಾರಣರಾದ ಡಾ. ಮಹಿಷಿ ಅವರಿಗೆ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿ ಕಾರ್ಯಕ್ರಮವನ್ನು ಮುಂದುವರಿಸಲಾಯಿತು. ಕಾಕತಾಳೀಯವೆಂದರೆ ಡಾ.ಸರೋಜಿನಿ ಮಹಿಷಿಯವರು ಕಳೆದ ಹಲವಾರು ವರ್ಷಗಳಿಂದ ಘಾಜಿಯಾಬಾದ್‌ನಲ್ಲಿ ನೆಲಸಿದ್ದರೂ ಮೂಲತಃ ಧಾರವಾಡದವರು. ಕಾರ್ಯಕ್ರಮವನ್ನು ನಡೆಸಿದುದು ಕೂಡಾ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ. ಹಾಗಾಗಿ ಧಾರವಾಡದ ಮಂದಿ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಡಾ. ಮಹಿಷಿಯವರ ಪಾರ್ಥಿವ ಶರೀರವನ್ನು ದೆಹಲಿಯ ಕನ್ನಡಿಗರ ಅಂತಿಮ ದರ್ಶನಕ್ಕಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಇಡಲಾಗಿತ್ತು. ಕೇಂದ್ರ ಸಚಿವರು, ಹಿರಿಯ ರಾಜಕಾರಣಿಗಳು ಮತ್ತು ಕನ್ನಡಿಗರು ಅಂತಿಮ ದರ್ಶನ ಪಡೆದರು.

ಡಾ. ಸರೋಜಿನಿ ಮಹಿಷಿಯವರ ನೆನಪಿನಲ್ಲಿ ದೆಹಲಿ ಕರ್ನಾಟಕ ಸಂಘ ಹೊರನಾಡಿನಲ್ಲಿರುವ ಕನ್ನಡಿಗರ ಸಾಹಿತ್ಯಕ್ಕೆ ಅಥವಾ ಸಾಹಿತಿಗಳಿಗೆ ಒಂದು ಪ್ರಶಸ್ತಿಯನ್ನು ನೀಡುವ ನಿರ್ಣಯ ಮಾಡಿದೆ. ಡಾ.ಸರೋಜಿನಿ ಮಹಿಷಿಯವರ ಬಗ್ಗೆ ಪಿ.ಎಚ್.ಡಿ. ಮಾಡುವವರಿಗೆ ಕೂಡಾ ದೆಹಲಿ ಕರ್ನಾಟಕ ಸಂಘ ಸಹಾಯವನ್ನು ನೀಡಲು ನಿರ್ಣಯ ತೆಗೆದುಕೊಂಡಿದೆ.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆಯ ದಶಮಾನೋತ್ಸವದ ಅಂಗವಾಗಿ ರಂಗಭೂಮಿ, ನೃತ್ಯ ಮತ್ತು ಸಂಗೀತಕ್ಕೆ ಸಂಬಂಧಿಸಿದಂತೆ ಸ್ಥಳೀಯ ಕನ್ನಡಿಗರಿಗಾಗಿ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ವಿವರವನ್ನು ಮುಂದಿನ ಪುಟದಲ್ಲಿ ಕಾಣಬಹುದು. ಸಂಘದ ಸದಸ್ಯರೆಲ್ಲರೂ ಈ ಉತ್ಸವದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳಬೇಕೆಂದು ಕೇಳಿಕೊಳ್ಳುವೆನು. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***


**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

## ನಾಟಕ

**19 ಫೆಬ್ರವರಿ 2015** ಗುರುವಾರ ಸಂಜೆ 6.00 ಗಂಟೆಗೆ

ಸಮುದಾಯ ಬೆಂಗಳೂರು ಪ್ರಸ್ತುತಪಡಿಸುವ
ನಾಟಕ : **ತುಘಲಕ್**
ರಚನೆ : ಗಿರೀಶ್ ಕಾರ್ನಾಡ್
ವಿನ್ಯಾಸ ಮತ್ತು ನಿರ್ದೇಶನ : ಡಾ. ಸ್ಯಾಮ್‌ಕುಟ್ಟಿ ಪಟ್ಟಂಕಾರಿ
ಸಹ ನಿರ್ದೇಶನ : ಡಾ. ಶ್ರೀಪಾದ ಭಟ್

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಫೆಬ್ರವರಿ 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಫೆಬ್ರವರಿ 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 22, ಫೆಬ್ರವರಿ 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 22 ಫೆಬ್ರವರಿ 2015 ರಂದು ಸಾಯಂಕಾಲ 4 ಗಂಟೆಯಿಂದ.

## ಸಂಘದ ಸಭಾಂಗಣದಲ್ಲಿ

**1 ಮಾರ್ಚ್ 2015** ಭಾನುವಾರ ಮಧ್ಯಾಹ್ನ 2.00 ಗಂಟೆಗೆ

ದೆಹಲಿ ರಾಜವೀರ ಮದಕರಿ ನಾಯಕ ಸಂಘ,
ನವದೆಹಲಿ ಇವರಿಂದ **"ಮದಕರಿ ನಾಯಕ ಉತ್ಸವ"**

## ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**24 ಫೆಬ್ರವರಿ ಯಿಂದ 3 ಮಾರ್ಚ್ 2015**

**ಸುಧೀರ್ ಫಡ್ನೀಸ್** ಅವರಿಂದ 'ಬಾಟಿಕ್' ಚಿತ್ರಗಳ ಪ್ರದರ್ಶನ. ಹೆಸರಾಂತ ಚಿತ್ರ ಕಲಾವಿದ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ದಿವಂಗತ ದತ್ತಾತ್ರೆಯ ಹಣಮಂತರಾವ್ ಕುಲಕರ್ಣಿ ಅವರ ಸ್ಮರಣಾರ್ಥ.

## ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ

# ರಂಗಭೂಮಿ, ನೃತ್ಯ ಮತ್ತು ಸಂಗೀತ ತರಬೇತಿ ಮತ್ತು ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆಯ ದಶಮಾನೋತ್ಸವದ ಅಂಗವಾಗಿ ರಂಗಭೂಮಿ, ನೃತ್ಯ ಮತ್ತು ಸಂಗೀತಕ್ಕೆ ಸಂಬಂಧಿಸಿದಂತೆ ಸ್ಥಳೀಯ ಕನ್ನಡಿಗರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು 2015ರ ಮಾರ್ಚ್ ಮತ್ತು ಎಪ್ರಿಲ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಖ್ಯಾತ ಕವಿ ಮತ್ತು ನಾಟಕಕಾರ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಮೈಸೂರಿನ ರಂಗಾಯಣದವರು ಕಳುಹಿಸಿಕೊಡುವ ನಿರ್ದೇಶಕರಿಂದ ನಾಟಕ ಅಭಿನಯ, ನಿರ್ದೇಶನ ಮತ್ತು ರಂಗ ಚಟುವಟಿಕೆ ಕುರಿತು ದೆಹಲಿಯ ರಂಗಾಸಕ್ತರಿಗಾಗಿ ಕಾರ್ಯಾಗಾರ ನಡೆಸಿ ಅವರಿಂದಲೇ ನಾಟಕವೊಂದರ ಪ್ರದರ್ಶನ.

ಬಾಯ್ ಝೋನ್ ತಂಡ ಮಂಗಳೂರು ಇವರಿಂದ ಸ್ಥಳೀಯ ಕಲಾವಿದರಿಗೆ ವಿವಿಧ ಪ್ರಕಾರಗಳ ನೃತ್ಯ ತರಬೇತಿ ನೀಡಿ ನೃತ್ಯ ಪ್ರದರ್ಶನ.

ಪರಿಣಿತರಿಂದ ಸಂಗೀತ ತರಬೇತಿ ನೀಡಿ ಸ್ಥಳೀಯ ಕಲಾವಿದರಿಂದ ಸಂಗೀತ ಕಾರ್ಯಕ್ರಮ.

ರಂಗಭೂಮಿಗೆ ಸಂಬಂಧಪಟ್ಟ ಕಾರ್ಯಾಗಾರವು ಸುಮಾರು 20 ದಿನಗಳು ನಡೆಯಲಿದೆ. ಸಂಗೀತ ಮತ್ತು ನೃತ್ಯ ತರಬೇತಿಯ ಅವಧಿ ಒಂದು ವಾರ. ರಂಗಭೂಮಿ ಕಾರ್ಯಗಾರ, ನೃತ್ಯ ಮತ್ತು ಸಂಗೀತ ತರಬೇತಿಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಆಸಕ್ತರು ದೆಹಲಿ ಕರ್ನಾಟಕ ಸಂಘದಲ್ಲಿ 2015 ಫೆಬ್ರವರಿ 28ರೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿ ನೊಂದಣಿ ಸಂಖ್ಯೆಯನ್ನು ಪಡೆದುಕೊಳ್ಳಬೇಕು.

ಒಬ್ಬರಿಗೆ ಒಂದು ವಿಷಯದಲ್ಲಿ ಮಾತ್ರ ಅವಕಾಶ. ನೃತ್ಯ ಮತ್ತು ಸಂಗೀತ ತರಬೇತಿಯನ್ನು ಕರ್ನಾಟಕದ ಪ್ರಮುಖ ಭಾಷೆಗಳು ಮತ್ತು ಹಿಂದಿಯಲ್ಲಿ ನೀಡಲು ಪ್ರಯತ್ನಿಸಲಾಗುವುದು. ತರಬೇತಿ ಮತ್ತು ಪ್ರದರ್ಶನದ ಸಮಯವನ್ನು ಮುಂದೆ ನಿಗದಿಪಡಿಸಲಾಗುವುದು.

ನೊಂದಣಿ ಮಾಡಲು ಮತ್ತು ಹೆಚ್ಚಿನ ವಿವರಗಳಿಗೆ ಸಂಘದ ಕಚೇರಿಯನ್ನು ಸಂಪರ್ಕಿಸಬಹುದು.

ದೂರವಾಣಿ : 26109615, 26104818
8860848585, 9871475213, 9868099427
email: dksangha@gmail.com

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 26104818**



# ಸಂಘದಲ್ಲಿ ಕರ್ನಾಟಕ ಉತ್ಸವ

ಶ್ರೀಮಂತವಾಗಿರುವ ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯನ್ನು ಕನ್ನಡಿಗರು ದೇಶ ಮತ್ತು ವಿಶ್ವದಾದ್ಯಂತ ಪಸರಿಸಬೇಕು. ದೆಹಲಿಯಂತಹ ನಗರದಲ್ಲಿ ನಡೆಯುವ ಕನ್ನಡ ಕಾರ್ಯಕ್ರಮಗಳಿಂದ ಇಂತಹ ಕೆಲಸಗಳ ಸಾಧ್ಯತೆ ಇದೆ ಎಂದು ಎಎನ್ಐ ಸುದ್ದಿಸಂಸ್ಥೆಯ ಸಂಪಾದಕರಾದ ಶ್ರೀಮತಿ ಸ್ಮಿತಾ ಪ್ರಕಾಶ್ ಅವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿಯಾಗಿ ಆಯೋಜಿಸಿದ ಎರಡು ದಿನಗಳ ಕರ್ನಾಟಕ ಉತ್ಸವವನ್ನು ಜನವರಿ 17ರಂದು ಉದ್ಘಾಟಿಸಿ ಮಾತಾಡುತ್ತಿದ್ದರು.
ದೆಹಲಿಯಂತಹ ಮಹಾನಗರಗಳಲ್ಲಿ ವಾಸಿಸುವ ನಮ್ಮಂತಹ ಎರಡನೇ ತಲೆಮಾರಿನ ಕನ್ನಡಿಗರು ಕರ್ನಾಟಕದ ಪರಂಪರೆಯನ್ನು ಅರಿಯಲು ಸಂಘವು ಆಯೋಜಿಸುವ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಶ್ರೀಮತಿ ಸ್ಮಿತಾ ಪ್ರಕಾಶ್ ಅವರು ಹೇಳಿದರು.

ಇಂಗ್ಲೇಂಡಿನ ಯಾದೇವಿ ನೃತ್ಯ ತಂಡದ ನಿರ್ದೇಶಕಿ ದೇವಿಕಾ ರಾವ್ ಅವರು ಮಾತಾಡುತ್ತಾ ಯಾದೇವಿ ತಂಡವು ಈಗಾಗಲೇ ಆರು ದೇಶಗಳಲ್ಲಿ ಕರ್ನಾಟಕ ಮಾತ್ರವಲ್ಲ ಭಾರತದ ಶಾಸ್ತ್ರೀಯ ನೃತ್ಯ ಹಾಗೂ ಶಾಸ್ತ್ರೀಯ ಸಂಗೀತವನ್ನು ಅಳವಡಿಸಿಕೊಂಡು ಹಲವಾರು ಪ್ರದರ್ಶನಗಳನ್ನು ನೀಡಿದೆ ಎಂದರು. ದೆಹಲಿಯಲ್ಲಿ ವಿದೇಶಿ ಕಲಾವಿದರಿಂದ ಭಾರತೀಯ ಶಾಸ್ತ್ರೀಯ ಕಾರ್ಯಕ್ರಮಗಳನ್ನು ನೀಡಲು ಸಹಕರಿಸಿದ ದೆಹಲಿ ಕರ್ನಾಟಕ ಸಂಘವನ್ನು ಸ್ಮರಿಸಿದರು.

ನಾವು ಸಾರ್ಥಕ ಬದುಕು ಸಾಗಿಸಬೇಕೆಂದರೆ ಸಾಂಸ್ಕೃತಿಕವಾದ ಮನಸ್ಸು ನಮ್ಮಲ್ಲಿರಬೇಕಾಗುತ್ತದೆ. ಸಾಂಸ್ಕೃತಿಕವಾದ ಮನಸ್ಸು ನಮ್ಮಲ್ಲಿರಬೇಕಾದರೆ, ಆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸೇವೆಯನ್ನು ಮಾಡಿದವರ ಆದರ್ಶಗಳು, ವಿಚಾರಗಳು ಮತ್ತು ಸಾಂಸ್ಕೃತಿಕ ವಿಷಯಗಳನ್ನು ನೋಡಿ ಅವರೊಂದಿಗೆ ಒಡನಾಟವನ್ನಿಟ್ಟುಕೊಂಡಾಗ ಮಾತ್ರ ಸಾಧ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಅವರು ಹೇಳಿದರು. ಸಾಂಸ್ಕೃತಿಕವಾದ ಮನಸ್ಸು ನಮ್ಮಲ್ಲಿ ಇಲ್ಲವಾದರೆ ನಮ್ಮ ಮಕ್ಕಳ ಕಾಲದಲ್ಲಿ ಮಾತನಾಡುವಂತಹ ಮಾತೃ ಭಾಷೆಯೂ ಕೂಡಾ ದೂರವಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಸಿದರು. ಸಾಂಸ್ಕೃತಿಕವಾದ ಒಡನಾಟ ಇಲ್ಲವಾದರೆ ನಾವು ನಮ್ಮ ಸಾಂಸ್ಕೃತಿಕ ಬದುಕಿನಿಂದ, ದೂರವಾಗಿ ಪರಿಪೂರ್ಣವಾಗಿ ಬದುಕುವ ಬದಲಾಗಿ, ಅಪರಿಪೂರ್ಣರಾಗಿ ನಾವು ನಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತೇವೆ ಎಂದರು.

ಈ ಸಂದರ್ಭದಲ್ಲಿ ಗಾಯಕಿ ಅನುರಾಧ ಧಾರೇಶ್ವರ ಅವರೂ ಮಾತಾಡಿ ಕಾರ್ಯಕ್ರಮದ ಸಂಘಟಕ ಶ್ರೀನಿವಾಸ ಜಿ. ಕಪ್ಪಣ ಅವರ ಪ್ರಯತ್ನವನ್ನು ಶ್ಲಾಘಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಕರ್ನಾಟಕ ಉತ್ಸವವು ಕರ್ನಾಟಕದ ಸಾಧಕಿಯರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕಾರ್ಯಕ್ರಮನ್ನು ಆಯೋಜಿಸುತ್ತಿದೆ. ಜೊತೆಗೆ ನಾವು ದೆಹಲಿಯಲ್ಲಿ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದೇವೆ. ಇವರು ಕರ್ನಾಟಕದ ಸಾಧಕಿಯರು ಎನ್ನುವುದಕ್ಕಿಂತಲೂ ಇಡೀ ಕರ್ನಾಟಕಕ್ಕೆ ಅತ್ಯಂತ ದೊಡ್ಡ ಹೆಸರನ್ನು ತಂದುಕೊಟ್ಟವರು ಎಂದು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ನುಡಿದರು.

ಕರ್ನಾಟಕ ಉತ್ಸವದ ಅಂಗವಾಗಿ ರಾಧಾಬಾಯಿ ಅವರಿಂದ ಚೌಡಿಕೆ, ಗುರು ಭಾನುಮತಿ ಅವರ ನೃತ್ಯ ನಿರ್ದೇಶನ ತಂಡದಿಂದ ಸಮೂಹ ನೃತ್ಯ, ಅನುರಾಧಾ ಧಾರೇಶ್ವರ ಅವರಿಂದ ಓ ಎನ್ನ ದೇಶಬಾಂದವರೇ ಹಾಗೂ ಶ್ರೀಮತಿ ಸಂಗೀತ ಕಟ್ಟಿ ಕುಲಕರ್ಣಿ ಅವರಿಂದ ಸುಗಮ ಸಂಗೀತ ಕಾರ್ಯಕ್ರಮಗಳು ನೆರವೇರಿತು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀನಿವಾಸ ಜಿ. ಕಪ್ಪಣ್ಣ ಅವರು ನಡೆಸಿಕೊಟ್ಟರು. ಸಭಾ ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ. ಅವರು ನಡೆಸಿಕೊಟ್ಟರು. ಸಮಾರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***



# ಅಚ್ಚಳಿಯದೆ ಉಳಿಯುವ ಸಾಧಕಿಯರ ಅದ್ಭುತ ಕಾರ್ಯಕ್ರಮ

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದೆಹಲಿ ಕರ್ನಾಟಕ ಸಂಘ ಜಂಟಿಯಾಗಿ ಜನವರಿ 17 ಮತ್ತು 18 2015ರಂದು ನಡೆಸಿದ ಕರ್ನಾಟಕ ಉತ್ಸವ ನಿಜವಾದ ಅರ್ಥದಲ್ಲಿ ಸಾಧಕಿಯರಿಗೆ ನೀಡಿದ ಅಪೂರ್ವ ಗೌರವ ಕಾರ್ಯಕ್ರಮವಾಗಿ ಮೂಡಿ ಬಂತು.

ಕಲೆ, ಸಂಗೀತ, ನೃತ್ಯ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ಅಮೋಘ ಸಾಧನೆಗೈದು ಕರ್ನಾಟಕ ರಾಜ್ಯ ಮತ್ತು ಕನ್ನಡ ಸಂಸ್ಕೃತಿಯನ್ನು ಮನೆ ಮಾತಾಗುವಂತೆ ಮಾಡಿದ ಎಂಟು ಮಂದಿ ಮಹಾನ್ ಕನ್ನಡ ತಾಯಿಯರನ್ನು ಒಂದು ವೇದಿಕೆಯ ಮೇಲೆ ತಂದು ಅವರನ್ನು ದೇಶದ ಆರು ರಾಜ್ಯಗಳಿಗೆ ಕರೆದೊಯ್ದು ಕಾರ್ಯಕ್ರಮ ಏರ್ಪಡಿಸಿ ಆ ಮೂಲಕ ಅವರನ್ನು ಗೌರವಿಸುತ್ತಿರುವುದು ನಿಜಕ್ಕೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶ್ಲಾಘನೀಯ ಕಾರ್ಯ.

ಸಿನೆಮಾ, ರೇಡಿಯೋ, ಕ್ಯಾಸೆಟ್‌ಗಳ ಮೂಲಕ ಯಾರ ಹಾಡುಗಳನ್ನು ಕೇಳುತ್ತಾ ದೊಡ್ಡವರಾದೆವೋ ಅಂತಹ ಬಿ.ಕೆ. ಸುಮಿತ್ರ, ಅನುರಾಧ ಧಾರೇಶ್ವರ, ಕಸ್ತೂರಿ ಶಂಕರ್ ಹಾಗೂ ಅಷ್ಟೇ ಮಹತ್ವಪೂರ್ಣವಾಗಿ ಸಂಗೀತಲೋಕಕ್ಕೆ ತಮ್ಮ ಕೊಡುಗೆ ನೀಡುತ್ತಿರುವ ಸಂಗೀತಕಟ್ಟಿ ಅವರ ಮಧುರ ಗಾಯನ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನೆರೆದಿದ್ದ ಕನ್ನಡ ಕಲಾಭಿಮಾನಿಗಳ ಹೃದಯವನ್ನು ಸ್ಪರ್ಶಿಸಿತು.

ನೃತ್ಯ ಗುರುಗಳಾದ ಬಿ. ಭಾನುಮತಿಯವರ ಶಿಷ್ಯೆಯರು ನಡೆಸಿಕೊಟ್ಟ ಅದ್ಭುತ ಭರತನಾಟ್ಯ ಕಾರ್ಯಕ್ರಮ ಹಾಗೂ ನೃತ್ಯ ವಿದೂಷಿ ಪ್ರತಿಭಾ ಪ್ರಹ್ಲಾದ್ ಅವರ ಅಭೂತಪೂರ್ವ ಭರತನಾಟ್ಯ ಕಾರ್ಯಕ್ರಮಗಳು ನಮ್ಮ ಭರತನಾಟ್ಯದ ಪರಂಪರೆ ಅದೆಷ್ಟು ಶ್ರೀಮಂತ ಎಂಬಂತೆ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡಿಸಿತು. ಈ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಕ್ಕೆ ಕಳಸವಿಟ್ಟಂತೆ ರಾಧಾಬಾಯಿಯವರು ತಮ್ಮ ಸಂಗಡಿಗರೊಂದಿಗೆ ನೀಡಿದ ಚೌಡಿಕೆ ಪೀಠದ ಹಾಡುಗಳು ದೆಹಲಿಯ ಕನ್ನಡಿಗರನ್ನು ಬೆಳಗಾಂನ ಅಥಣಿಗೆ ಕೊಂಡೊಯ್ದು ಆ ದೇವಿ ಯಲ್ಲಮ್ಮನ ದರ್ಶನ ಮಾಡಿಸಿದವು. ನಾಡೋಜ ಬಿ. ಜಯಶ್ರೀ ಮತ್ತು ತಂಡದವರು ಸದಾರಮೆ, ಜೋಕುಮಾರಸ್ವಾಮಿ, ಕರಿಮಾಯಿ ಮೊದಲಾದ ನಾಟಕಗಳ ಮತ್ತು ಬಿ.ವಿ. ಕಾರಂತರ ಸಂಗೀತ ಸಂಯೋಜನೆಯ ರಂಗಗೀತೆಗಳನ್ನು ಹಾಡಿ ಕಿಕ್ಕಿರಿದು ನೆರೆದಿದ್ದ ಕಲಾರಸಿಕರನ್ನು ಇನ್ನೊಂದು ಲೋಕಕ್ಕೆ ಕೊಂಡೊಯ್ದರು.

ಎರಡು ದಿನಗಳ ಕಾಲ ಈ ಕಾರ್ಯಕ್ರಮವನ್ನು ಅತ್ಯಂತ ಅರ್ಥಗರ್ಭಿತವಾಗಿ ಸಂಯೋಜಿಸಿ ನಡೆಸಿಕೊಟ್ಟವರು ಕರ್ನಾಟಕ ಸಾಂಸ್ಕೃತಿಕ ರಂಗದ ಹಿರಿಯ ನಿರ್ದೇಶಕರಾದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣನವರು.

ಈ ಕಾರ್ಯಕ್ರಮದ ವೈಶಿಷ್ಟ್ಯವೆಂದರೆ ಈ ಎಲ್ಲಾ ಮಹಾಸಾಧಕಿಯರ ಹಾಡು, ನೃತ್ಯದ ಜೊತೆಗೆ ಅವರ ನಿಜ ಜೀವನ–ಬಾಲ್ಯದ ತಂದೆ ತಾಯಿಯವರ, ಗಂಡಂದಿರ ಹಲವಾರು ಸರಳ ಸತ್ಯಗಳು ಆಯಾ ಕಲಾವಿದರಿಂದ ಹಾಗೂ ಕಪ್ಪಣ್ಣನವರ ಮೂಲಕ ಬಿಡಿಸಿಕೊಂಡದ್ದು.

ಕಸ್ತೂರಿಶಂಕರ್ ಅವರು ಸುಂದರವಾಗಿ ವಚನಗಳನ್ನು ಹಾಡುತ್ತಾ ತಮ್ಮ ತಂದೆ, ಮನೆತನ, ಗಂಡ, ಭಾವರ ಬಗ್ಗೆ ಆಡಿದ ಮಾತುಗಳು, ಸುಮಿತ್ರಾರವರು ತಮ್ಮ ಅಕ್ಕ, ತಂದೆ ವಿದ್ಯಾಭ್ಯಾಸದ ದಿನಗಳನ್ನು ನೆನೆದುಕೊಂಡದ್ದು, ಧಾರೇಶ್ವರರು ತಮ್ಮ ಅನುಭವಗಳನ್ನು ಹಂಚಿಕೊಂಡದ್ದು, ರಾಧಾಬಾಯಿಯವರು ತಮ್ಮ ಅಮೆರಿಕಾ ಅನುಭವವನ್ನು ತೋಡಿಕೊಂಡಿದ್ದು, ಜಯಶ್ರೀಯವರ ಗುಬ್ಬಿ ಕಂಪನಿ ಹಾಗೂ ನಾಟಕಗಳ ನಿರ್ದೇಶಕರಾದ ಬಿ.ವಿ. ಕಾರಂತ, ಸಿ.ಆರ್. ಸಿಂಹ, ಎಂ.ಎಸ್. ಸತ್ಯು, ಸಿ. ಅಶ್ವಥ್ ಅವರೊಡನೆ ಬೆಳೆದು ಬಂದುದದನ್ನು ಕಪ್ಪಣ್ಣ ಅವರು ಬಣ್ಣಿಸಿದ್ದು, ಬಿ. ಭಾನುಮತಿಯವರು ತಮ್ಮ ವಿದ್ಯಾವಂತ ಶಿಷ್ಯೆಯರ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ದಯಾನಂದ ಅವರ ಅರ್ಥಪೂರ್ಣ ಮಾತುಗಳು, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಸಿ.ಎಂ. ನಾಗರಾಜ ಮತ್ತು ಶ್ರೀಮತಿ ಆಶಾಲತ ಅವರು ಕಾರ್ಯಕ್ರಮಕ್ಕೆ ತಮ್ಮದೇ ಮೆರುಗು ನೀಡಿದ್ದು ಎಲ್ಲವೂ ಒಂದು ಮರೆಯಲಾಗದ ಅನುಭವ.

ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದೆಹಲಿಯ ಚಳಿಯ ನಡುವೆ ಇಂತಹ ಅದ್ಭುತ ಕಾರ್ಯಕ್ರಮ ನೀಡಿ ನಮ್ಮೆಲ್ಲರ ಬದುಕಿಗೆ ಅರ್ಥ ತುಂಬುವುದರ ಜೊತೆ ಈ ಮಹಾನ್ ಸಾಧಕಿಯರೊಡನೆ ಬೆರೆಯುವ, ಮಾತನಾಡುವ, ಗೌರವಿಸುವ ಸುವರ್ಣಾವಕಾಶ ಒದಗಿಸಿಕೊಟ್ಟಿತು. ಅ

***ಸಖಾರಾಮ ಉಪ್ಪೂರು***







# ಅಪೂರ್ವವಾದ ಕರ್ನಾಟಕ ಸಾಧಕಿಯರ ಉತ್ಸವ

ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 17 ಮತ್ತು 18ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಡೆದ ಕರ್ನಾಟಕ ಸಾಧಕಿಯರ ಉತ್ಸವ ಒಂದು ಮಹೋನ್ನತ ಕಾರ್ಯಕ್ರಮ ಮತ್ತು ಒಂದು ಮಹತ್ತರ ಸಾಧನೆ.

ರಾಧಾಬಾಯಿ ಮತ್ತು ಸಂಗಡಿಗರಿಂದ ಮೂಡಿಬಂದ ಚೌಡಿಕೆ ಒಂದು ಅದ್ಭುತವಾಗಿತ್ತು. ರಾಧಾಬಾಯಿ ಅವರ ಗಾಯನ, ಕಂಠಸಿರಿ ಅವರ್ಣನೀಯ. ಈ ಚೌಡಿಕೆ ವಾದ್ಯವನ್ನು ಕಂಡು ಅದರ ಶಬ್ದವನ್ನು ಅನುಭವಿಸಲು ಸಿಕ್ಕಿದ ಅವಕಾಶ ಬಹಳ ಅಮೂಲ್ಯವಾದುದು.

ನೃತ್ಯಗುರು ಭಾನುಮತಿಯವರ ಶಿಷ್ಯೆಯರಿಂದ ನಡೆದ ಸಮೂಹ ನೃತ್ಯ ಕಣ್ಣುಗಳಿಗೆ ರಸದೌತಣವನ್ನು ನೀಡಿತು.  ಅವರು ಹಾಕಿದ ಹೆಜ್ಜೆಗಳು ಬಹಳ ಸಮಕಾಲಿಕ. ನನಗಂತೂ ಅದು ಒಂದು ಸಿಂಕ್ರೋನೈಸ್ಡ್ ಇಂಜಿನೀಯರಿಂಗ್ ಪರ್ಫೆಕ್ಷನ್ ಅಂತನಿಸಿತು. ಬಹಳಷ್ಟು ಕಾಲ ಆ ದೃಶ್ಯಗಳನ್ನು ನಮ್ಮಿಂದ ಮರೆಯಲಾಗುವುದಿಲ್ಲ.

ಧಾರವಾಡದ ಅನುರಾಧ ಧಾರೇಶ್ವರ ಅವರ ವಿಭಿನ್ನ ಪ್ರಯೋಗಗಳು ಮನಮೋಹಕವಾಗಿದ್ದವು. ಅವರ ಹಾಡುಗಳಲ್ಲಿ ತುಂಬಿದ ವೈವಿಧ್ಯತೆ ಮತ್ತು ಸೆಳೆತ ಮನಸ್ಸಿಗೆ ಮುದ ನೀಡುವ ಕ್ಷಣಗಳಾಗಿದ್ದವು.

ಸಂಗೀತ ಕಟ್ಟಿ ಕುಲಕರ್ಣಿಯವರ ಸಂಗೀತ ಹಮಾರ, ಸರಿತಾ ಆಪ್‌ಕಿ ನರನಾಡಿಗಳ ಚೈತನ್ಯವನ್ನು ಬಡಿದೆಬ್ಬಿಸಿದ ಶಬ್ಧಭಂಡಾರ. ಅವರು ಕೊಟ್ಟ ಸಂಗೀತದ ಮಜಲು ಅರ್ಥಗರ್ಭಿತವಾಗಿತ್ತು. ಅವರು ಇನ್ನೂ ಸ್ವಲ್ಪ ಭಾವಗೀತೆಗಳ ಔತಣ ನೀಡಿದ್ದರೆ ಮತ್ತಷ್ಟೂ ವೈಭವ ರಂಗೇರುತ್ತಿತ್ತು. ಇದೊಂದು ಮರೆಯಲಾಗದ ಮೆಲುಕು ಹಾಕುವ ಸಂಜೆಯಾಗಿತ್ತು.

ಕಸ್ತೂರಿ ಶಂಕರ್ ಅವರ ವಚನಗಳ ಹಾಡುಗಾರಿಕೆ ಅಧ್ಯಾತ್ಮಿಕದ ಎಳೆಯನ್ನು ಪರಿಚಯಿಸಿತು. ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರ ಹೊನ್ನ ಕಲಶವಯ್ಯ ಎಂಬುದನ್ನು ನಮ್ಮ ಸಂಸಾರದಲ್ಲಿ ಬಹಳ ಕಾಲದಿಂದಲೂ ಅಳವಡಿಸಿಕೊಂಡಿದ್ದೇವೆ. ಹೃದಯಕ್ಕೆ ಸಂಬಂಧಿಸಿದ ಈ ವಚನಗಳನ್ನು ಅವರು ನಮಗೆ ಉಣಿಸಿದರು.


ಎಲ್ಲರಿಗೂ ಅಕ್ಕನಾಗಿರುವ ಬಿ.ಕೆ. ಸುಮಿತ್ರ ಅವರಿಂದ ತೇಲಿ ಬಂದ ಚಿರಪರಿಚಿತ ಸುಮಧುರ ಸವಿ ನೆನಪುಗಳೂ ಅತಿ ಅಲೆಯಂತೆ ನಮ್ಮೆಲ್ಲರ ಮೈಮನಸುಗಳನ್ನು ಆವರಿಸಿತು. ಅವರೂ ಮರೆಯಲಾಗದ ಮಧುರ ಮಂಜುಳಗಾನವನ್ನು ನೀಡಿದರು.

ನಾಟ್ಯದ ಪಾವಿತ್ರ್ಯತೆ ಮತ್ತು ಉತ್ತುಂಗವನ್ನು ಪರಿಚಯಿಸಿದ ಪ್ರತಿಭಾ ಪ್ರಹ್ಲಾದ್ ಅವರು,  ತಮ್ಮ ದಿಟ್ಟ, ಸುಲಲಿತ, ತರಂಗಮಯ ಹೆಜ್ಜೆಗಳಿಂದ ಇಹಲೋಕವನ್ನು ಮರೆಯುವಂತಹ ಆ ಮಧುರ ನಿಮಿಷಗಳಿಂದ ನಮ್ಮೆಲ್ಲರನ್ನು ಬೇರೊಂದು ಮಜಲಿಗೆ ಕರೆದೊಯ್ದರು. ಅವರ ನಾಟ್ಯಾಭಿನಯ ನಮ್ಮ ಕೆನ್ನೆಗಳನ್ನು ಕಣ್ಣೀರಿನಿಂದ ಪಾವನಗೊಳಿಸಿತು.

ನಾಡೋಜ ಬಿ. ಜಯಶ್ರೀ ಅವರ ಕಂಚಿನಕಂಠ, ಧ್ವನಿಯ ಏರಿಳಿತ, ಬಡಿದೆಬ್ಬಿಸುವ ತರಂಗಸ್ವರದಲ್ಲಿ ರಂಗಗೀತೆಗಳು ನಮಗೆ ಚೈತನ್ಯದ ಚಿಲುಮೆಯಾದವು.

ಸಂಗೀತ ನೃತ್ಯಗಳ ರಸದೌತಣವನ್ನು ಆಯೋಜಿಸಿದ ಶ್ರೀನಿವಾಸ ಜಿ. ಕಪ್ಪಣ್ಣ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಶ್ರೀ ಸಿ.ಎಂ. ನಾಗರಾಜ ಅವರಿಗೆ ಅಭಿನಂದನೆಗಳು. ಅ

***ನರೇಂದ್ರ ಎ. ಮತ್ತು ಡಿ.ವಿ. ಪ್ರಫುಲ್ಲ***











# ಇಂದಿನ ಸಂಬಂಧಗಳು

ಇಂದಿನ ಸಂಬಂಧಗಳು
ಇರುವುದೇನೋ ನಿಜವೇ
ಗಟ್ಟಿ ಸರಪಳಿಗಳಾಗಿರದೇ
ನೂಲಿನಂತೆ ಸಡಿಲಗೊಂಡಿವೆ
ಎಂದೆನಿಸುವುದಿಲ್ಲವೇನು?

ಗಂಡ–ಹೆಂಡಿರ, ಒಡಹುಟ್ಟಿದವರ
ಬಂಧು ಬಾಂಧವರ, ನೆರಹೊರೆಯ
ಇಷ್ಟೇಕೆ, ತಾಯ್ತಂದೆ ಮಕ್ಕಳ
ಇತ್ತೀಚಿನ ಸಂಬಂಧಗಳು
ಹರಿದ ಬಟ್ಟೆಯಂತೆ ಮುರಿದ ಗಾಜಿನಂತೆ
ವಕ್ರವೆನಿಸುವುದಿಲ್ಲವೇನು?

ವಿಶ್ವಾಸ–ವಿನಯ–ವಿವೇಕ
ಮೂರೂ ಮಾಯವಾಗಿ
ಸ್ವಾರ್ಥತೆಯ "ಅಹಂ" ಎಲ್ಲೆಲ್ಲೂ ತುಂಬಿ
ಇತ್ತೀಚಿನ ಸಂಬಂಧಗಳು
ಸುಟ್ಟ ರೊಟ್ಟಿಯಂತೆ, ಕೆಟ್ಟ ಹಣ್ಣಿನಂತೆ
ನಾರುತಿದೆ ಎಂದೆನಿಸುವುದಿಲ್ಲವೇನು?

"ಯಾರಿಗೆ ಯಾರುಂಟು ಎರವಿನ ಸಂಸಾರ
ನೀರನ ಮೇಲಿನ ಗುಳ್ಳೆ ನಿಜವಲ್ಲಾ ಹರಿಯೇ"
ದಾಸರು ಹಾಡಿದರಂದು
ಅಕ್ಷರಕ್ಷರ ನಿಜ ಇಂದು, ಎಂದೆಂದೂ
ಇತ್ತೀಚಿನ ಸಂಬಂಧಗಳು ಪೂರ್ಣ ಹರಿಯುವ ಮುನ್ನ
ಎಚ್ಚೆತ್ತು ಕೊಳ್ಳೋಣವೇನು??

**ಕಲಾಚಾರಿ**

# ಹರಿಯುವ ಗಂಗೆ ಮಾದರಿ ಎನಗೆ

ನೋಡಿದೆ ನಾ ನೋಡಿದೆ ಅವಳ
ಬಳುಕುತ ನಲಿಯುತ ಹರುಷದಿ ಧುಮ್ಮಿಕ್ಕುತ
ಚಿಮ್ಮುತನಾಗುವ ಹರಿಯುವ ಗಂಗೆ!

ನವ ವಧುವಿನ ಉತ್ಸಾಹದ ಚಿಲುಮೆ
ನಲ್ಲನ ಸೇರುವ ಓಟದ ಆತುರ
ಜೀವನ ಪಯಣದಿ ಧೈರ್ಯದಿ ಸಾಗುವ
ಹರಿದಿರುವಳು ಗಂಗೆ !

ದೂರದ ಹಿಮದಿಂ ಓಡೋಡುತ ಬರಲು
ಮುಟ್ಟಲು ಅವಳ ತಂಪಿನ ಒಡಲು
ಇಂಪಿನ ನಾದದ ಸಂಗೀತದ ಹಿನ್ನೆಲೆ
ಎಲ್ಲರ ಪ್ರೀತಿಯ ಪಾತ್ರ ಸುಕೋಮಲೆ
ಹರಿಯುತ ಹರಿಯುತ ಸಾಗುವ ಗಂಗೆ !

ಅವಳ ನೋಡಿದ ಕಣ್ಣಳು ಸಾರ್ಥಕ
ತಬ್ಬಲು ಅವಳ ತಣ್ಣನೆ ಪುಳಕ
ಅವಳ ಪ್ರೀತಿಯಲಿ ಮುಳುಮುಳುಗಿ ಏಳಲು
ಕುಣಿಯಿತು ತನುಮನ ಆನಂದದಿ ಲಕಲಕ !

ನೋಡ ನೋಡುತ ಅವಳ ಕಲಿತೆನು ನಾನು
ಜೀವನವೇ ಅವಳು, ಅವಳೇ ಜೀವನವು
ಮೇಲು ಕೀಳು, ಉಬ್ಬು ತಗ್ಗುಗಳು
ಎಲ್ಲವ ಎದುರಿಸಿ ಸಾಗಲು ಮುಂದೆ
ಹಿಂದೆ ನೋಡದೇ ಕೊಳೆಯ ತೊಳೆಯುತೆ
ಆನಂದದ ಗುರಿ ಸಾಗರ ಸಿಗುವುದು ಆಗಲೇ
ನೋಡನೋಡುತ ಗಂಗೆ ಆದಳು ಮಾದರಿ ಎನಗೆ !!

**ಕಲಾಚಾರಿ**

# ನನ್ನವಳು

ನನ್ನವಳ ಬಣ್ಣಿಸಲು ನನ್ನ ಬಳಿ
ಪದಗಳಿಲ್ಲ, ಶಬ್ಧಗಳಿಲ್ಲ, ಮಾತುಗಳಿಲ್ಲ
ಚಲುವೆ ಗುಣವಂತೆ ಮತಿವಂತೆ
ಸಂಸಾದರದ ಆಗು ಹೋಗುಗಳಲ್ಲಿ
ಹಾಸುಹೊಕ್ಕಾಗಿದ್ದಾಳೆ ಎಳೆಯ
ಮಕ್ಕಳ ಉಚ್ಚೆ ಹೇಲು ಬಾಚುವುದರಿಂದ
ಹಿಡಿದು ಹಿರಿಯ ವೃದ್ಧರ ಸ್ನಾನ ಊಟ
ಉಪಚಾರದವರೆಗೆ ಬಂದವರ
ನೆಂಟರಿಷ್ಟರ ನೆರೆಹೊರೆಯವರ
ಬೇಕು ಬೇಡಗಳಿಗೆ ಸ್ಪಂದಿಸಿ ಅವರವರ
ಇಚ್ಚೆಗೆ ಅಗತ್ಯಕ್ಕೆ ತಕ್ಕಂತೆ ತನ್ನನ್ನು
ಹೊಂದಿಸಿಕೊಂಡಿದ್ದಾಳೆ ಬೆಳಿಗ್ಗೆ
ಮಧ್ಯಾಹ್ನ
ಸಂಜೆ ರಾತ್ರಿ ಎಂಬ ಹೊತ್ತಗೊತ್ತಿಲ್ಲದೆ
ಎಲ್ಲೆಂದರಲ್ಲಿ ಯಾವಾಗ ಬೇಕಾದರೂ
ಸದಾ ನಸುನಗುತ್ತಾ ಸಿದ್ಧಳಾಗಿರುತ್ತಾಳೆ
ಸಾಂತ್ವನ ನೀಡಲು ಸುಖಕೊಡಲು
ಆಹಾ! ಅದೆಂತಹ ಸಹನೆ, ಸ್ಥೈರ್ಯ
ಸ್ಫೂರ್ತಿ, ವಾತ್ಸಲ್ಯ ಮಮತೆಯ ಮೂರ್ತಿ
ಬೇಜಾರದ ಗೆರೆಯೇ ಇಲ್ಲ ಅವಳ
ಮುಖದಲ್ಲಿ ಬಂದುದೆಲ್ಲವ ತನ್ನ
ಸೌಭಾಗ್ಯವೆಂದು ಬಾಚಿಕೊಳ್ಳುವ
ದುಃಖಮಮ್ಮಾನದ ಪರಿಚಯವೇ
ಇಲ್ಲದ ಅದೆಂತಹ ಅದ್ಭುತ ಶಕ್ತಿ ಈಕೆ !

**ಸಖಾರಾಮ ಉಪ್ಪೂರು**




# ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಐದನೇ ಮಹಾಮೇಳ

## "ವಿವಿಧತೆಯಲ್ಲಿ ಏಕತೆ ಕಾಣುವ ಸಮಾಜ ಕನ್ನಡಿಗರದ್ದು"

**- ಸದಾನಂದ ಗೌಡ**

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಸಮಾಜ ಕನ್ನಡಿಗರದ್ದಾಗಿದೆ. ಸಂಸ್ಕೃತಿ, ಸಂಸ್ಕಾರ, ಪ್ರೀತಿ, ವಿಶ್ವಾಸ ಇದು ಕನ್ನಡಿಗರ ಆಧಾರಸ್ತಂಭವಾಗಿದೆ ಎಂದು ಕೇಂದ್ರದ ಕಾನೂನು ಸಚಿವ ಶ್ರೀ ಡಿ.ವಿ. ಸದಾನಂದ ಗೌಡ ಹೇಳಿದರು.

ಅವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ದೆಹಲಿ ಕರ್ನಾಟಕ ಸಂಘವು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 24 ಮತ್ತು 25ರಂದು ಏರ್ಪಡಿಸಿದ್ದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಐದನೇ ಮಹಾಮೇಳದ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಕನ್ನಡದ ಕೆಲಸ ಮಾಡಿದ್ದೇವೆಂದು ಹೇಳುವ ಧೈರ್ಯ ಕವಿಗಳಿಗೆ ಇದೆ, ಆದರೆ ರಾಜಕಾರಣಿಗಳಿಗೆ ಇಲ್ಲ. ಜಗತ್ತು ಸಣ್ಣದಾಗಬೇಕೆಂಬ ಪರಿಕಲ್ಪನೆ ಮನುಷ್ಯನದಾಗಿದೆ. ಆದರೆ ಜಗತ್ತಿನ ಜೊತೆಗೆ ಮನುಷ್ಯನ ಮನಸ್ಸು ವಿಶಾಲವಾಗಬೇಕೆಂಬ ಬಯಕೆ ನಮ್ಮ ಹಿರಿಯರದ್ದಾಗಿದೆ. ದೇಶದ ಯಾವುದೇ ಭಾಷೆಗಿಂತ ಕನ್ನಡ ಭಾಷೆಗೆ ಹೆಚ್ಚು ಗೌರವ ದೊರೆತಿದೆ, ಎಂದು ಅವರು ಹೇಳಿದರು.




ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳೆಸಲು ಹೊಸ ಹೊಸ ಹೆಜ್ಜೆಗಳನ್ನು ಸಂಘಟನೆಗಳ ಮೂಲಕ ಇಡುವುದು ಅವಶ್ಯವಾಗಿದೆ ಎಂದು ಹೇಳಿ ಕನ್ನಡದ ರಾಜಕಾರಣಿಗಳು ಇತರರಿಗಿಂತ ಭಿನ್ನವಾಗಿದ್ದು, ಕನ್ನಡ ರಾಜಕಾರಣಿಗಳ ವೈಶಿಷ್ಟ್ಯತೆ ಶಿಸ್ತು ಕನ್ನಡತನದಿಂದ ಬಂದಿದೆ. ತಾನು ಮುಖ್ಯಮಂತ್ರಿಯಾಗಿದ್ದಾಗ ಹೊರನಾಡ ಕನ್ನಡಿಗರ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸ್ಪಂದಿಸಿದ್ದು ಭವಿಷ್ಯದಲ್ಲಿಯೂ ಕೇಂದ್ರದಿಂದ ಸಾಧ್ಯವಾದಷ್ಟು ಸಹಾಯ, ಸಹಕಾರ ನೀಡುವ ಭರವಸೆಯನ್ನು ಶ್ರೀ ಸದಾನಂದ ಗೌಡ ಅವರು ನೀಡಿದರು.

ಗೋವಾ ಕನ್ನಡಿಗ ಸಮಸ್ಯೆಗಳ ಬಗ್ಗೆ ಮಾತನಾಡಿದ ಶ್ರೀ ಸದಾನಂದ ಗೌಡ ಅವರು, ಕೇಂದ್ರ ಸರಕಾರ ಯಾವುದೇ ರಾಜ್ಯ ಸರಕಾರದ ಮೇಲೆ ಹಸ್ತಕ್ಷೇಪ ಮಾಡುವುದಿಲ್ಲ. ಎಲ್ಲ ರಾಜ್ಯ ಸರಕಾರಗಳ ಜೊತೆಗೆ ಸಮನ್ವಯದಿಂದ ಕೆಲಸ ಮಾಡುತ್ತದೆ. ಆದ್ದರಿಂದ ಗೋವಾ ಕನ್ನಡಿಗರ ಸಮಸ್ಯೆಯನ್ನು ಆದಷ್ಟು ಬೇಗನೆ ಪರಿಹರಿಸುವ ಭರವಸೆಯನ್ನು ಅವರು ನೀಡಿದರು.

ಕೇಂದ್ರ ಸಚಿವ ಶ್ರೀ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕನ್ನಡಿಗರು ಎಲ್ಲಿ ಕಡಿಮೆ ಸಂಖ್ಯೆಯಲ್ಲಿ ಇದ್ದಾರೊ ಅಲ್ಲಿ ಸಂಘಟಿತರಾಗುತ್ತಿದ್ದಾರೆ. ಆದರೆ ಹೆಚ್ಚು ಕನ್ನಡಿಗರು ವಾಸಿಸುವಲ್ಲಿ ಸಂಘಟಿತರಾಗುತ್ತಿಲ್ಲ, ಇದು ವಿಷಾದದ ಸಂಗತಿ ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಜೆ.ಎಸ್. ಪಾಟೀಲ ಅವರು ಸ್ಥಳೀಯ ಸಂಸ್ಕೃತಿಯ ಪುನರುಜ್ಜೀವನಗೊಳಿಸಲು ನಾವು ವಿಫಲರಾಗಿದ್ದು, ಕನ್ನಡ ಭಾಷೆ ಉಳಿಸಿ, ಬೆಳೆಸುವ ಜವಾಬ್ದಾರಿ ನಮ್ಮದಾಗಿದೆ ಎಂದು ಹೇಳಿದರು.

ಭಾರತದ ಸಹಾಯಕ ಸಾಲಿಸಿಟರ್ ಜನರಲ್, ಧಾರವಾಡ ಹೈಕೋರ್ಟ್‌ನ ಕೆ.ಬಿ. ನಾವಲಗಿಮಠ ಅವರು, ನಾನು ಕನ್ನಡಿಗ, ಅಪ್ಪಟ ಕನ್ನಡಾಭಿಮಾನಿ ಆದರೆ ಮೊದಲು ನಾನು ಭಾರತೀಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಶ್ರೀ ಸದಾನಂದ ಗೌಡ ಮತ್ತು ಶ್ರೀ

ಜಿ.ಎಂ. ಸಿದ್ದೇಶ್ವರ ಅವರನ್ನು ಸನ್ಮಾನಿಸಿದರು. ದೆಹಲಿ ಕರ್ನಾಟಕ ಸಂಘದ ಪರವಾಗಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಂಸದ ಪ್ರೊ. ಐ.ಜಿ. ಸನದಿ ಮಾತನಾಡಿದರು.

ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಸ್ವಾಗತಿಸಿದರೆ, ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರ ಹಲಗತ್ತಿ, ಸಹಕಾರ್ಯದರ್ಶಿ ಶ್ರೀ ಶಿವಾನಂದ ಭಾವಿಕಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಾಧ್ಯಕ್ಷ ಡಾ. ಡಿ.ಎಂ. ಹಿರೇಮಠ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಬಸವಪ್ರಭು ಹೊಸಕೇರಿ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಉಪಸ್ಥಿತರಿದ್ದರು. ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

**ಉದ್ಘಾಟನಾ ಸಮಾರಂಭದಲ್ಲಿ ನ್ಯಾಯಮೂರ್ತಿ ಗೋಪಾಲ ಗೌಡ**

ಹಿಂದಿನ ದಿನ ಮಹಾಮೇಳವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ ಅವರು ಸಾಂಸ್ಕೃತಿಕ ಭಾವನಾತ್ಮಕ ಕರ್ನಾಟಕಕ್ಕೆ ಗಡಿ ರೇಖೆ ಇರುವುದಿಲ್ಲ. ಕನ್ನಡಿಗರು ಇಡೀ ವಿಶ್ವದಲ್ಲಿ ಎಲ್ಲಿರುತ್ತಾರೋ ಅಲ್ಲೆಲ್ಲ ಒಂದು ಸಾಂಸ್ಕೃತಿಕ ಮತ್ತು ಭಾವನಾತ್ಮಕವಾದ ಕರ್ನಾಟಕವಾಗಿರುತ್ತಾರೆ ಎಂದರು.

ಭೌಗೋಳಿಕ ಗಡಿರೇಖೆಗಳ ವಿಷಯದಲ್ಲಿ ರಾಜ್ಯ ರಾಜ್ಯಗಳ ನಡುವೆ ವ್ಯಾಜ್ಯಗಳಿರಬಹುದು, ಸಂಘರ್ಷಗಳಿರಬಹುದು. ಆದರೆ ಸಾಂಸ್ಕೃತಿಕ, ಭಾವನಾತ್ಮಕ ರಾಜ್ಯಗಳ ನಡುವೆ ಕದನ ವ್ಯಾಜ್ಯಗಳು ಇರುವುದಿಲ್ಲ, ಇರಲೂಬಾರದು. ಕನ್ನಡ ಭಾಷೆಗೆ ಎರಡು ಸಹಸ್ರಮಾನಗಳ ಇತಿಹಾಸವಿದೆ. ಈ ಸುದೀರ್ಘ ಕಾಲದ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಕನ್ನಡಿಗರಾದ ನಾವೆಲ್ಲರೂ ವಾರಸುದಾರರು ಆದ್ದರಿಂದ ನಾವೆಲ್ಲರೂ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿ ಶ್ರಮಿಸುವುದು ಅವಶ್ಯವಾಗಿದೆ ಎಂದು ಶ್ರೀ ಗೋಪಾಲಗೌಡ ಅವರು ಹೇಳಿದರು.

ಒಂದು ಕಾಲದಲ್ಲಿ ಜನಕ್ಕೆ ತಾವು ಹುಟ್ಟಿದಲ್ಲೇ ಗಟ್ಟಿಯಾಗಿ ಬೇರು ಬಿಟ್ಟು ಬೆಳೆಯುವುದು ರೂಢಿಯಾಗಿತ್ತು. ಆ ಕಾಲದಲ್ಲಿ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ನೆಲೆಸುವುದು ಅನಿವಾರ್ಯವಾಗಿರಲಿಲ್ಲ. ಆದರೆ ನಾಗರಿಕತೆ ಬೆಳೆದಂತೆ, ಸಮಾಜ ಹೆಚ್ಚು ಹೆಚ್ಚು ಸಂಕೀರ್ಣವಾದಂತೆ ಮನುಷ್ಯನು ಒಂದು ಕಡೆಯಿಂದ ಮತ್ತೊಂದು ಕಡೆ ಹೋಗಿ ನೆಲೆಸುವುದು ಅನಿವಾರ್ಯವಾಗಿದೆ ಎಂದು ಶ್ರೀ ಗೋಪಾಲಗೌಡ ಅವರು ಹೇಳಿದರು.

ಈಗಂತೂ ಹುಟ್ಟುವ ಪ್ರತಿ ಮಗು ರೆಕ್ಕೆ ಕಟ್ಟಿಕೊಂಡು ಹುಟ್ಟಿದಂತೆ ಭಾಸವಾಗಿದೆ. ಆದರೆ ರೆಕ್ಕೆ ಕಟ್ಟಿಕೊಂಡು ಹಾರಾಡುವವರು ತಮ್ಮ ಬೇರುಗಳನ್ನು ಮರೆಯಬಾರದು. ನಾವು ತಾಯಿನಾಡನ್ನು ಬಿಟ್ಟು ಬಂದಿದ್ದೇವೆ ಎಂಬ ಅನಾಥ ಪ್ರಜ್ಞೆ ನಮ್ಮಲ್ಲಿ ಇರಬಾರದು. ನಾವೆಲ್ಲರೂ ತಾಯಿನಾಡಿನ ರಾಯಭಾರಿಗಳಂತೆ ಇರಬೇಕಲ್ಲದೆ ಬೇರೆ ಭಾಷೆಯವರ ಜೊತೆ ಸಹಬಾಳ್ವೆಯನ್ನು ಮಾಡುವುದನ್ನು ಕಲಿಯಬೇಕು. ನಾವು ಕನ್ನಡದ ಪರಾಗವನ್ನು ಹೊರನಾಡಿನಲ್ಲಿ ತಂದು ಝೇಂಕರಿಸುವ ಪುಷ್ಪದಂತೆ ನ್ಯಾಯಕ್ಕಾಗಿ ಬಡಿದಾಡದೇ ನ್ಯಾಯಯುತವಾಗಿ ಬದುಕಬೇಕು ಎಂಬುವದು ನ್ಯಾಯಾಧೀಶನಾದ ನನ್ನ ನಿಲುವು ಎಂದು ಶ್ರೀ ಗೋಪಾಲಗೌಡ ಅವರು ಹೇಳಿದರು.

**ನಾವೆಲ್ಲರೂ ತಾಯಿನಾಡಿನ ರಾಯಭಾರಿಗಳಂತೆ ಇರಬೇಕಲ್ಲದೆ ಬೇರೆ ಭಾಷೆಯವರ ಜೊತೆ ಸಹಬಾಳ್ವೆಯನ್ನು ಮಾಡುವುದನ್ನು ಕಲಿಯಬೇಕು.**

ಭಾಷೆ ಎಂದರೆ ಅದು ಕೇವಲ ಸಂವಹನ ಮಾಧ್ಯಮವಷ್ಟೆ ಅಲ್ಲ. ಅದೊಂದು ಸಂಸ್ಕೃತಿ, ಒಂದು ಜೀವನದ ವಿಧಾನ. ಒಂದು ಭಾಷೆಯಲ್ಲಿ ಆಯಾ ಭಾಷೆಯನ್ನಾಡುವ ಜನಸಮುದಾಯ ಭೂತ, ವರ್ತಮಾನ ಭವಿಷ್ಯತ್ತುಗಳೆಲ್ಲ ಮುದ್ರಿತವಾಗಿರುತ್ತವೆ ಎಂದು ಹೇಳಿದ ಶ್ರೀ ಗೋಪಾಲಗೌಡರು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯವನ್ನು ಶ್ಲಾಘಿಸಿದರು.

ಮಹಾಮೇಳದ ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಕನ್ನಡಿಗರ ಮನಸ್ಸು ಬಹಳ ವಿಶಾಲವಾಗಿದೆ. ಔದಾರ್ಯದಿಂದ ಕೂಡಿದೆ. ಇದಕ್ಕೆ ಮಹಾರಾಷ್ಟ್ರದ ಖ್ಯಾತ ಸಾಹಿತಿ ವಿ.ಸ. ಖಾಂಡೇಕರ ಅವರಿಗೆ ಜ್ಞಾನಪೀಠ ಪ್ರಶಸ್ತಿ ನೀಡುವಂತೆ ಅನುಮೋದಿಸಿದ್ದು ಕನ್ನಡಿಗರ ಔದಾರ್ಯದ ಗುಣವನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದರು. ಜಗತ್ತಿನಲ್ಲಿ 6000 ಭಾಷೆಗಳಿವೆ. ಅದರಲ್ಲಿ ಪ್ರಾಚೀನ ಭಾಷೆಗಳು 16 ಇದ್ದು ಅದರಲ್ಲಿ ಕನ್ನಡವೂ ಒಂದು. ಕನ್ನಡ ಮತ್ತು ತಮಿಳು ಪ್ರಾಚೀನ ಭಾಷೆಯಾಗಿವೆ. ಕನ್ನಡಕ್ಕೆ ಪ್ರಾಚೀನ ಕಾಲದಲ್ಲಿ ಲಿಪಿಯನ್ನು ಹೊಂದಿತ್ತು. ಆದರೆ ತಮಿಳು ಏಳನೇ ಶತಮಾನದಲ್ಲಿ ಲಿಪಿ ಹೊಂದಿತು ಎಂದು ಅವರು ಹೇಳಿದರು.

ಕರ್ನಾಟಕ ವಿಭಜನೆಯ ಕುರಿತು ವಿರೋಧ ವ್ಯಕ್ತಪಡಿಸಿದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ನಿಪ್ಪಾಣಿಯನ್ನು ಹೊಸ ಜಿಲ್ಲೆಯನ್ನಾಗಿ ಮಾಡಬೇಕೆಂದು ಆಗ್ರಹಿಸಿದರು. ಅಲ್ಲದೇ ಕರ್ನಾಟಕ ಮತ್ತು ಮಹಾರಾಷ್ಟ್ರದ ಅವಿನಾಭಾವ ಸಂಬಂಧವನ್ನು ವಿವರಿಸಿದರು.







ಮಹಾಮೇಳಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೆಹಲಿ ದೂರದರ್ಶನ ಕೇಂದ್ರದ ಹೆಚ್ಚುವರಿ ಮಹಾನಿರ್ದೇಶಕ ಡಾ. ಮಹೇಶ ಜೋಶಿ ಅವರು ದೆಹಲಿ ಇತಿಹಾಸ ಕುರಿತು ಮಾತನಾಡಿ, ಇದೊಂದು ಮಹಾಭಾರತದ ಹಸ್ತಿನಾಪುರ. ದೆಹಲಿಯಲ್ಲಿ ಅನೇಕ ಧ್ವನಿಗಳು ಕೇಳಿಬರುತ್ತವೆ. ಆದರೆ ಕನ್ನಡದ ಸಾಂಸ್ಕೃತಿಕ ಭಾಷೆಯ ಧ್ವನಿ ಎಲ್ಲ ಜನರೂ ಕೇಳುವಂತಹದು ಎಂದು ಹೇಳಿ ಇಂದಿನ ಈ ಮಹಾಮೇಳವನ್ನು ಉದ್ಘಾಟಿಸಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ವಿ. ಗೋಪಾಲಗೌಡರು ಕನ್ನಡದ ಹಣತೆಯನ್ನು ಹಚ್ಚಿದ್ದಾರೆ. ಇಲ್ಲಿ ಹಚ್ಚಿದ ಕನ್ನಡದ ಹಣತೆಯ ಪ್ರಖರತೆಯನ್ನು ಕಂಡು ಸೂರ್ಯದೇವನು ಸಹಿತ ಭೇಷ್ ಭೇಷ್... ನನಗೆ ಪ್ರತಿಸ್ಪರ್ಧಿಸುವ ಹಣತೆಗಳು ಇಲ್ಲಿವೆ ಎಂದು ಹೇಳುವಂತಾಗಿದೆ ಎಂದರು.

ಕನ್ನಡಿಗರು ಹನುಮಂತನ ನಾಡಿನವರು. ಹನುಮನಿಗೆ ಇರುವ ಅಭಿಮಾನವನ್ನು ನಾವು ಮುಂದುವರೆಸಿಕೊಂಡು ಬಂದಿದ್ದೇವೆ. ಕನ್ನಡಿಗರಲ್ಲಿ ಅಭಿಮಾನದ ಕೊರತೆ ಇದೆ. ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯ ಇದರಂತೆ ದ್ವೈತ, ಅದ್ವೈತ ಹಾಗೂ ವಿಶಿಷ್ಟ ಅದ್ವೈತ ಸಂಗಮವಾಗಿರುವುದು

ಕೇವಲ ಕರ್ನಾಟಕದಲ್ಲಿ. ಆಂಜನೇಯ ಹೇಗೆ ಚಿರಂಜೀವಿಯೋ ಹಾಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯೂ ಚಿರಂಜೀವಿ. ಕನ್ನಡ ಭಾಷೆಗೆ ಗ್ರಹಣ ಹಿಡಿದಿರಬಹುದು, ಗ್ರಹಣ ಬಿಡಿಸುವ ಕಾರ್ಯ ಕನ್ನಡಪರ ಸಂಘಟನೆಗಳು ಮಾಡಲಿವೆ ಎಂಬ ವಿಶ್ವಾಸವನ್ನು ಡಾ. ಮಹೇಶ ಜೋಶಿ ವ್ಯಕ್ತಪಡಿಸಿದರು. ಕನ್ನಡದ ಚಂದನದಲ್ಲಿ ನಾನಿರುವವರೆಗೂ ಎಲ್ಲೆಲ್ಲಿ ಕನ್ನಡಿಗರಿದ್ದಾರೋ ಅಲ್ಲಲ್ಲಿ ಮಧುರ ಮಧುರವೀ ಮಂಜುಳ ಗಾನ ಕಾರ್ಯಕ್ರಮವನ್ನು ನಡೆಸಿಕೊಡುವುದಾಗಿ ಹೇಳಿ ಕನ್ನಡದ ಬಗ್ಗೆ ಹೋರಾಡುವ ಪ್ರಸಂಗ ಬಂದರೆ ಮೊದಲ ಸೈನಿಕ ನಾನಾಗುವೆ. ಕನ್ನಡದ ತೇರನ್ನು ಎಳೆಯುವ ಕೆಲಸವನ್ನು ನಾನು ಮಾಡುವೆ ಎಂದು ಡಾ. ಮಹೇಶ ಜೋಶಿ ಅವರು ಭರವಸೆ ನೀಡಿದರು.

ಮಾಜಿ ಸಂಸದ ಪ್ರೊ. ಐ.ಜಿ. ಸನದಿ ಅವರು ಮಹಾಮೇಳವನ್ನು ಉದ್ದೇಶಿಸಿ ಮಾತನಾಡಿ, ಕನ್ನಡದ ಕಂಪು ಮನುಷ್ಯನನ್ನು ಸೆಳೆಯುತ್ತದೆ. ಕನ್ನಡದ ಕಂಪು ವಿದೇಶದಲ್ಲಿಯೂ ಕಂಡು ಬರುತ್ತಿದುದ್ದು ಹೆಮ್ಮೆಯ ಸಂಗತಿ. ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಕನ್ನಡಕ್ಕಿದೆ. ಕನ್ನಡ ಬಾಳಿ ಬದುಕಬೇಕು. ಕನ್ನಡದಿಂದ ಬದುಕು ಹಸನಾಗಿಸಿಕೊಂಡು ನಾವೆಲ್ಲರೂ ಸಮರ್ಪಣಾ ಭಾವದಿಂದ ಕನ್ನಡದ ಕಾರ್ಯವನ್ನು ಮಾಡೋಣ. ಕನ್ನಡದ ಕಂಪನ್ನು ಎಲ್ಲೆಡೆ ಹರಡೋಣ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿ. ಗೋಪಾಲ ಗೌಡ ಹಾಗೂ ನಾಡೋಜ ಡಾ. ಮಹೇಶ ಜೋಶಿ ಅವರನ್ನು ಸನ್ಮಾನಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಡಾ. ಡಿ.ಎಂ. ಹಿರೇಮಠ ಅವರು, ಹೊರನಾಡ ಕನ್ನಡಿಗರ ನೋವು ನಲಿವುಗಳ ಚಿಂತನ–ಮಂಥನ ನಡೆಸಿ ಹೊರನಾಡಿನಲ್ಲಿ ಕನ್ನಡದ ಅಭಿವೃದ್ಧಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಮಹಾಮೇಳಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿ, ನಮ್ಮ ಕೂಗು ಗಟ್ಟಿಯಾಗಿದ್ದರೆ ನಾವು ಏನನ್ನಾದರೂ ಸಾಧಿಸಬಹುದು ಎಂಬುವುದಕ್ಕೆ ದೆಹಲಿ ಕರ್ನಾಟಕ ಸಂಘದ ಸಾಧನೆಯೇ ಸಾಕ್ಷಿ ಎಂದು ಹೇಳಿದರು.

ಮಧ್ಯಪ್ರದೇಶದ ಅಮರಕಂಟಕ ಇಂದಿರಾಗಾಂಧಿ ನ್ಯಾಶನಲ್ ಟ್ರೈಬಲ್ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ತೇಜಸ್ವಿ ಕಟ್ಟಿಮನಿ, ವಿಶ್ರಾಂತ ಕುಲಪತಿ ಡಾ. ಜೆ.ಎಸ್. ಪಾಟೀಲ, ಶ್ರೀ ಕೆ.ಬಿ. ನಾವಲಗಿಮಠ, ಶ್ರೀ ಬಿ.ಎಸ್. ಕಲ್ಲೂರ, ಶ್ರೀ ಆರ್.ಬಿ. ಹೆಬ್ಬಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿನಿಯರಾದ ಕು. ಜಾಹ್ನವಿ ಮತ್ತು ಕು. ಸಂಧ್ಯಾ ಪ್ರಾರ್ಥನೆ ಗೀತೆ ಹಾಡಿದರು. ದೆಹಲಿ ಕರ್ನಾಟಕ ಸಂಘದ ಮಹಿಳಾ ಸದಸ್ಯರು ನಾಡಗೀತೆ ಹಾಡಿದರು. ಹರ್ಲಾಪುರದ ಶಂಭಯ್ಯ ಹಿರೇಮಠ, ಸಿ. ವಾಯ್. ಸಿ.ಡಿ.

**ಕನ್ನಡದ ಕಂಪು ವಿದೇಶದಲ್ಲಿಯೂ ಕಂಡು ಬರುತ್ತಿದುದ್ದು ಹೆಮ್ಮೆಯ ಸಂಗತಿ. ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಕನ್ನಡಕ್ಕಿದೆ**

ಕಲಾತಂಡ ಹಚ್ಚೇವು ಕನ್ನಡ ದೀಪ ಹಾಡು ಪ್ರಸ್ತುತಪಡಿಸಿದರು.

ದೆಹಲಿ ಕರ್ನಾಟಕದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಶ್ರೀ ಕೃಷ್ಣ ಜೋಶಿ ಕಾರ್ಯಕ್ರಮ ನಿರೂಪಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು.

### ವಿಚಾರಗೋಷ್ಠಿಗಳು

ಮಹಾಮೇಳದಲ್ಲಿ ದೆಹಲಿಯಲ್ಲಿ ಕನ್ನಡ ಅಂದು–ಇಂದು ಎಂಬ ವಿಷಯದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ, ಹಿರಿಯ ಬರಹಗಾರ ಜೆಎನ್‌ಯು ಪ್ರಾಧ್ಯಾಪಕ ಡಾ. ಎಚ್.ಎಸ್. ಶಿವಪ್ರಕಾಶ ಅವರು ಹೊರನಾಡ ಕನ್ನಡಿಗರಿಗಾಗಿ ದೆಹಲಿಯಲ್ಲಿ ಕನ್ನಡ ಸಾಂಸ್ಕೃತಿಕ ಭವನ ನಿರ್ಮಾಣ ಅಗತ್ಯವಾಗಿದೆ ಎಂದು ಹೇಳಿದರು. ಸಾಂಸ್ಕೃತಿಕ ಭವನ ನಿರ್ಮಿಸಿ, ಇಲ್ಲಿ ಕನ್ನಡಿಗರ ಶಿಬಿರ ನಡೆಯಬೇಕು. ಮತ್ತು ಇತರ ಭಾಷಿಕರೊಂದಿಗೆ ವಿಚಾರ ವಿನಿಮಯವಾಗಬೇಕು. ಇದರೊಂದಿಗೆ ಕನ್ನಡಿಗರ ಮಾಹಿತಿ ವಿನಿಮಯ ಕೇಂದ್ರವೂ ಆಗಬೇಕು ಎಂದು ಡಾ. ಶಿವಪ್ರಕಾಶ ಹೇಳಿದರು.

ದೆಹಲಿ ಕನ್ನಡ ಶಾಲೆಯ ನಿವೃತ್ತ ಶಿಕ್ಷಕ, ಖ್ಯಾತ ಚಿತ್ರಕಲಾವಿದ ಕೆ.ಆರ್. ಸುಬ್ಬಣ್ಣ ಅವರು ದೆಹಲಿಯಲ್ಲಿ ಕನ್ನಡ ಶೈಕ್ಷಣಿಕ ಪ್ರಗತಿ ಕುರಿತು ಮಾತನಾಡಿ, ಕನ್ನಡ ಭಾಷೆಯ ಬೆಳವಣಿಗೆ ಹೊರನಾಡ ಕನ್ನಡಿಗರ ಮೇಲೂ ಜವಾಬ್ದಾರಿ ಇದೆ. ಹೊರನಾಡು ಕನ್ನಡಿಗರು ತಮ್ಮ ಮಕ್ಕಳಿಗೆ ಮನೆಯಲ್ಲಿ ಕನ್ನಡ ಕಡ್ಡಾಯವಾಗಿ ಕಲಿಸಿದಾಗ ಕನ್ನಡ ಉಳಿದು ಬೆಳೆಯುತ್ತದೆ ಎಂದರು.

ಗುರುಗಾಂವ ಐಸಿಎಸ್‌ಎಂ ಪ್ರಾಧ್ಯಾಪಕ ಡಾ. ಸಖಾರಾಮ ಉಪ್ಪೂರ್ ಅವರು ದೆಹಲಿಯಲ್ಲಿ











# ಹೊರರಾಜ್ಯ ಕನ್ನಡಿಗರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು








ಕನ್ನಡ ಸಾಂಸ್ಕೃತಿಕ ಪ್ರಗತಿ ಎಂಬ ವಿಷಯ ಕುರಿತು ಮಾತನಾಡಿ, ದೆಹಲಿಯಲ್ಲಿರುವ ಕನ್ನಡಿಗರು ಕನ್ನಡ ಉಳಿಸಿ ಬೆಳೆಸುತ್ತಿದ್ದಾರೆ. ದೆಹಲಿಯಲ್ಲಿ ಕನ್ನಡ ನಾಟಕಗಳು ಹೆಚ್ಚು ಪ್ರದರ್ಶನವಾಗುತ್ತವೆ. ದೆಹಲಿಯಲ್ಲಿ ನವಂಬರ್ ತಿಂಗಳಲ್ಲಿ ರಾಜ್ಯೋತ್ಸವ ನಡೆಯುತ್ತದೆ. ಈ ಮೂಲಕ ಕನ್ನಡದ ಕಲೆ ಮತ್ತು ಸಂಸ್ಕೃತಿಯ ಪ್ರದರ್ಶನವು ದೆಹಲಿಯಲ್ಲಿ ನಡೆಯುತ್ತವೆ ಎಂದು ಹೇಳಿದರು.

ದೆಹಲಿಯ ಜೆಎನ್‌ಯು ಪ್ರಾಧ್ಯಾಪಕ ಡಾ. ವೆಂಕಟಾಚಲ ಹೆಗಡೆ ಅವರು ದೆಹಲಿಯಲ್ಲಿ ಕನ್ನಡ ಸಾಹಿತ್ಯಿಕ ಪ್ರಗತಿ ಕುರಿತು ಮಾತನಾಡಿ, ಸ್ವಾತಂತ್ರ್ಯ ನಂತರ 2–3 ದಶಕಗಳಲ್ಲಿ ದೆಹಲಿಯಲ್ಲಿ ಕನ್ನಡ ಸಾಹಿತ್ಯ ಅಷ್ಟೊಂದು ಬೆಳವಣಿಗೆ ಇರಲಿಲ್ಲ. ಇತ್ತೀಚಿನ 3 ದಶಕಗಳಿಂದ ನಾಟಕ, ಕಾವ್ಯ–ಕವನ ಇನ್ನಿತರ ಸಾಹಿತ್ಯಿಕ ಬೆಳವಣಿಗೆ ನಡೆಯುತ್ತಿವೆ ಎಂದರು.

ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಕೇಂದ್ರದ ಡಾ. ಈಶ್ವರ ಬಸವರಡ್ಡಿ, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಡೀನ್ ಡಾ. ಚಿದಾನಂದ ಮವಸೂರು, ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಶ್ರೀನಿವಾಸ ವಾಡಪ್ಪಿ ಅವರು ಗೋಷ್ಠಿ ಕುರಿತು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಮನೋಜ ಪಾಟೀಲ ಸ್ವಾಗತಿಸಿದರು. ದೆಹಲಿ ಕರ್ನಾಟಕ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರನಾಡ ಕನ್ನಡಿಗರಿಗೆ ಅತೀ ಹೆಚ್ಚು ಅನುದಾನ ನೀಡುವ ಮೂಲಕ ಕನ್ನಡ ಸಂಸ್ಕೃತಿಯನ್ನು ಪ್ರಚುರಪಡಿಸಲು ಶ್ರಮಿಸುತ್ತಿದೆ**

ಸಂಘದ ಕೋಶಾಧ್ಯಕ್ಷ ಡಾ. ವೈ. ಅವನೀಂದ್ರನಾಥ ರಾವ್ ಕಾರ್ಯಕ್ರಮ ನಿರೂಪಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆನಂದ ಮುರಗೋಡ ವಂದಿಸಿದರು.

ಹೊರರಾಜ್ಯಗಳಲ್ಲಿ ಮಹಿಳೆ ಮತ್ತು ಮಕ್ಕಳು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಎಂ. ಆಶಾಲತಾ ಮಾತನಾಡಿ, ಮಹಿಳೆ–ಮಕ್ಕಳ ಸಮಸ್ಯೆಗಳ ಬಗ್ಗೆ ಸರಕಾರ ಬರೀ ಘೋಷಣೆಗಳನ್ನು ಮಾಡದೇ ಇದ್ದ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತರಬೇಕು ಎಂದರು.

ನೋಯ್ಡಾದ ಜೆ.ಎಸ್.ಎಸ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿರುವ ಶ್ರೀಮತಿ ಪೃಥಿ ಕಾರಿಂಜೆ ಅವರು ಉದ್ಯೋಗಸ್ಥ ಮಹಿಳೆಯ ಆತಂಕಗಳು ಮತ್ತು ಬರೋಡಾ ಕರ್ನಾಟಕ ಸಂಘದ ಶ್ರೀಮತಿ ಶೋಭಾ ಉಪ್ಪಿನ ಅವರು ಗೃಹಿಣಿಯರ ಸವಾಲುಗಳು ವಿಷಯಗಳ ಕುರಿತು ಮಾತನಾಡಿದರು. ಗೋಷ್ಠಿಗೆ ಪ್ರತಿಕ್ರಿಯಿಸಿದ ಯು.ಪಿ.ಎಸ್.ಸಿ. ಪರೀಕ್ಷಾರ್ಥಿ ಮನಿಷ ದೇಶಪಾಂಡೆ ಮಾತನಾಡಿ, ಪರೀಕ್ಷಾರ್ಥಿಗಳು ದೆಹಲಿಯ ಶೈಕ್ಷಣಿಕ ವಾತಾವರಣದ ಸದುಪಯೋಗ ಪಡಿಸಿಕೊಳ್ಳಲು ಸಲಹೆ ನೀಡಿದರು.

ಮಹಾಮೇಳದಲ್ಲಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ರಂಗಾಯಣ ಆಡಳಿತಾಧಿಕಾರಿ ಶ್ರೀ ಕೆ. ಎಚ್. ಚೆನ್ನೂರ ಅವರು, ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಹೊರನಾಡ ಕನ್ನಡಿಗರಿಗೆ ರಾಷ್ಟ್ರದಲ್ಲಿಯೇ ಅತೀ ಹೆಚ್ಚು ಅನುದಾನ ನೀಡುತ್ತಾ ಬಂದಿದೆ ಎಂದು ಹೇಳಿದರು. ಇಲಾಖೆ ಹೊರನಾಡ ಕನ್ನಡಿಗರಿಗೆ ಅತೀ ಹೆಚ್ಚು ಅನುದಾನ ನೀಡುವ ಮೂಲಕ ಕನ್ನಡ ಸಂಸ್ಕೃತಿಯನ್ನು ಪ್ರಚುರಪಡಿಸಲು ಶ್ರಮಿಸುತ್ತಿದೆ. ಮುಂಬರುವ ದಿನಗಳಲ್ಲೂ ಇಲಾಖೆ ಇಂತಹ ಮೇಳಗಳಿಗೆ ಸಹಾಯ, ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಹೊರನಾಡ ಕನ್ನಡ ಸಂಘಗಳ ಸದಸ್ಯರಿಂದ ಸಿದ್ದಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಧಾರವಾಡದಲ್ಲಿ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಉತ್ಸವ ಏರ್ಪಡಿಸುವಂತೆ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರಿಗೆ ಈ ಸಂದರ್ಭದಲ್ಲಿ ರಂಗಾಯಣ ಆಡಳಿತಾಧಿಕಾರಿ ಕೆ. ಎಚ್. ಚೆನ್ನೂರ ಅವರು

ವಿನಂತಿಸಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಬರುವ ದೀಪಾವಳಿಯ ಒಳಗಾಗಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ 125 ರ ಸಂಭ್ರಮದ ಅಂಗವಾಗಿ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಉತ್ಸವ ಹಮ್ಮಿಕೊಳ್ಳುವುದಾಗಿ ಪ್ರಕಟಿಸಿದರು.

ಬೆಳಗಾವಿಯ ಬೆಟಗೇರಿ ಕೃಷ್ಣ ಶರ್ಮ ಟ್ರಸ್ಟಿನ ಅಧ್ಯಕ್ಷ ಶ್ರೀ ರಾಘವೇಂದ್ರ ಪಾಟೀಲ ಮಾತನಾಡಿ, ಕನ್ನಡ ಸಂಸ್ಕೃತಿ ಉಳಿವಿಗಾಗಿ ಇಂಥ ಮಹಾಮೇಳದಂಥ ಕಾರ್ಯಕ್ರಮಗಳು ನಡೆಯುತ್ತಿರಬೇಕು. ಕನ್ನಡ ಭಾಷೆಯ ಕುರಿತು ಅಭಿಯಾನ ಪ್ರಾರಂಭಿಸಬೇಕೆಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಮತ್ತು ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರ ಹಲಗತ್ತಿ ಸ್ವಾಗತಿಸಿದರು. ಇನ್ನೊರ್ವ ಸದಸ್ಯೆ ಶ್ರೀ ಜಿ.ಐ. ವಾಲಿ ಕಾರ್ಯಕ್ರಮ ನಿರೂಪಿಸಿದರು.

ಮಹಾಮೇಳದಲ್ಲಿ ಪೋರ್ಚುಗೀಸ್ ಸಾಹಿತ್ಯದಲ್ಲಿ ಕನ್ನಡ–ಕನ್ನಡಿಗ–ಕರ್ನಾಟಕ ವಿಷಯ ಕುರಿತು ಮಾತಾಡಿದ ಗೋವೆಯ ಡಾ. ಅರವಿಂದ ಯಾಳಗಿ ಅವರು ಫ್ರೆಂಚ್ ಭಾಷೆ ಸುಂದರ, ಮಧುರ ಹಾಗೂ ಹೃದಯಸ್ಪರ್ಶಿ ಭಾಷೆಯಾಗಿದ್ದು, ಫ್ರೆಂಚರು ತಮ್ಮ ಸಾಹಿತ್ಯದ ಮೂಲಕ ಅಣ್ಣ ಬಸವಣ್ಣನನ್ನು ಸಾಗರದಾಚೆಗೂ ಪರಿಚಯಿಸಿದ ಹೆಗ್ಗಳಿಕೆ ಫ್ರೆಂಚ್ ಸಾಹಿತಿಗಳದ್ದಾಗಿದೆ ಎಂದು ಹೇಳಿದರು.

ಪೋರ್ಚುಗೀಸ್ ಸಾಹಿತ್ಯಕ್ಕೂ ಕನ್ನಡಕ್ಕೂ ಅವಿನಾಭಾವ ಸಂಬಂಧವಿದೆ ಎಂಬುದಕ್ಕೆ ಧಾರವಾಡದ ಅತ್ತಿಕೊಳ್ಳದ ಸೌಂದರ್ಯದ ಕುರಿತಾಗಿ ಫ್ರೆಂಚ್ ಸಾಹಿತಿ ಬೆಗನ್ ಪೆರೇರಾ ಅವರ ಕವನವೇ ಸಾಕ್ಷಿ ಎಂದರು.

ದೆಹಲಿ ಮಾಧ್ಯಮಗಳಲ್ಲಿ ಕನ್ನಡದ ಹಿರಿಮೆಗಳು ಕುರಿತು ಮಾತನಾಡಿದ ದೆಹಲಿಯ ಸಂವಹನಕಾರ ಶ್ರೀ ಬಾಲಕೃಷ್ಣ ನಾಯ್ಕ್ ಡಿ. ಅವರು ದೆಹಲಿಯು ಸ್ಥಳೀಯ ಮಾಧ್ಯಮಗಳ ಮಹಾಸಾಗರ. ಕೇಂದ್ರ ಸರಕಾರದ ಮಾಧ್ಯಮ ಕೇಂದ್ರಗಳಿಗೆ ಹಿರಿಯ ಅಧಿಕಾರಿಗಳನ್ನು ನೀಡಿದ ಹೆಗ್ಗಳಿಕೆ ಕನ್ನಡಿಗರದ್ದಾಗಿದೆ ಎಂದರು.

ಗೋಷ್ಠಿಗೆ ಚಾಲನೆ ನೀಡಿದ ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ ವಿ.ಆರ್. ಗುಡ್ಡೇಗೌಡ, ಹೊರರಾಜ್ಯಗಳಲ್ಲಿ ಕನ್ನಡದ ರಾಯಭಾರತ್ವ ಹೇಗೆ ಮಾಡುವುದು? ಕುರಿತು ಮಾತನಾಡಿ, ಬೆಂಗಳೂರು ಐಟಿ, ಬಿಟಿ ಕ್ಷೇತ್ರವಾಗಿ ಮಾರ್ಪಾಟಾದಂತೆ ನಾವೆಲ್ಲ ವಿಶ್ವದ ಕಣ್ಮಣಿಗಳಾಗಿದ್ದೇವೆ. ದೇಶದ ಒಳಗೂ ಹೊರಗೂ ರಾಯಭಾರತ್ವ ಇದ್ದು ಅದು ಇರಲೇಬೇಕಾಗಿದೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರಿಗೆ ವಿಶೇಷ ಗೌರವವಿದ್ದು, ಸಂಸದರು ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಗೋಷ್ಠಿ ಕುರಿತು ಪ್ರತಿಕ್ರಿಯಿಸಿದ ಪತ್ರಕರ್ತ ಶ್ರೀ ಮಲ್ಲಿಕಾರ್ಜುನ ಸಿದ್ದಣ್ಣವರ, ಗೋವಾದಲ್ಲಿ ಪೋರ್ಚುಗೀಸ್ ಸಾಹಿತ್ಯವನ್ನು ಉಳಿಸಿ ಬೆಳೆಸಿದವರು ಅಂದು ಹಾಗೂ ಇಂದಿಗೂ ಕನ್ನಡಿಗರಾಗಿದ್ದಾರೆ. ಗೋವಾದ ಬೈನಾ ಬೀಚ್ ಹಾಗೂ ಕಾಟೇಬೈನಾ ಬೀಚ್ ಪ್ರದೇಶಗಳಲ್ಲಿ ಶತ ಪ್ರತಿಶತ ಜನ ಕನ್ನಡಿಗರು ವಾಸವಾಗಿದ್ದಾರೆ. ಉತ್ತರ ಕರ್ನಾಟಕದ ಹಲವೆಡೆ ಈಗಲೂ ಪೋರ್ಚುಗೀಸ್ ಭಾಷೆ ಮಾತನಾಡುವ ಜನರಿದ್ದಾರೆ ಎಂದರು.

ಧಾರವಾಡದ ಹಿರಿಯ ನ್ಯಾಯವಾದಿ, ಹೋರಾಟಗಾರ ಶ್ರೀ ಬಿ.ಡಿ. ಹಿರೇಮಠ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಕೇಂದ್ರ ವಾರ್ತಾ ಇಲಾಖೆಯ ನಿರ್ದೇಶಕ ಶ್ರೀ ವಿಶು ಕುಮಾರ, ಹೊರನಾಡಿನಲ್ಲಿ ಕನ್ನಡದ ಕಾರ್ಯ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಪಂಜಾಬ್‌ನ ಶ್ರೀ ಪಂಡಿತರಾವ್ ಧರೆಣ್ಣವರ ಪಂಜಾಬ್‌ನಲ್ಲಿ ತಾವು ಕೈಕೊಂಡ ಕನ್ನಡದ ಕೈಂಕರ್ಯವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ









## ದೆಹಲಿಯ ತಂಡಗಳಿಂದ ನೃತ್ಯ ಪ್ರದರ್ಶನ










ಬೆಳ್ಳಾರೆ ಅವರು ಮಾತನಾಡಿ, ಕನ್ನಡ ಸಾಹಿತ್ಯ ಸಂಸ್ಕೃತಿ, ಕಲೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕನ್ನಡಿಗರಾದ ನಾವೆಲ್ಲ ಒಟ್ಟಾಗಿ ಕರ್ನಾಟಕದ ರಾಯಭಾರಿಯಾಗಿ ಕಾರ್ಯನಿರ್ವಹಿಸೋಣ ಎಂದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಗುರು ತಿಗಡಿ ಸ್ವಾಗತಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ವಿ.ವಿ. ಬಿರಾದಾರ ನಿರೂಪಿಸಿದರು.

ಮಹಾಮೇಳದಲ್ಲಿ ನಡೆದ ಕವಿ ಮಿಲನದ ಅಧ್ಯಕ್ಷತೆಯನ್ನು ಬೆಂಗಳೂರು ದೂರದರ್ಶನದ ಶ್ರೀಮತಿ ನಿರ್ಮಲಾ ಯಲಿಗಾರ ಅವರು ವಹಿಸಿದ್ದರು. ಲಾವಣ್ಯ ಬಸವರಾಜ್, ಬಾಲಕೃಷ್ಣ ನಾಯ್ಕ್ ಡಿ., ರೇಣುಕಾ ನಿಡಗುಂದಿ, ಡಾ. ಗುರುಸಿದ್ಧಯ್ಯಸ್ವಾಮಿ, ಚನ್ನಪ್ಪ ಅಂಗಡಿ, ಡಾ. ಎಸ್. ಲಕ್ಷ್ಮೀದೇವಿ, ಎಚ್.ಆರ್. ಚಲವಾದಿ, ಬಿ.ಪಿ. ಈರಲಿಂಗಪ್ಪ, ಜಗದೀಶ ಕೂಡ್ಲ, ಟಿ. ದಿವಾಕರ, ಶಶಿಕುಮಾರ, ಗದ್ದಿಹಳ್ಳಿ ಗುರುಬಸವರಾಜ, ಸಂಕಮ್ಮ ಸಂಕಣ್ಣನವರ, ಸವಿತಾ ಇನಾಮದಾರ, ಡಾ. ವೈ ಅವನೀಂದ್ರನಾಥ್ ರಾವ್, ಚೆನ್ನು ಎಸ್. ಮಠದ, ಗಿರೀಶ ಜಕಾಪುರೆ, ಶ್ರೀನಿವಾಸ ಗಂಗೂರ, ವೀರನಗೌಡ ಪಾಟೀಲ, ನಿಂಗಣ್ಣ ಕುಂಟಿ, ಎಸ್.ಎಂ. ನಟರಾಜ, ಎಸ್.ಎಸ್. ಅರ್ಲಪದವು, ವೀರೇಶ ಕೆ.ಎಂ., ಡಾ. ಸದಾನಂದ ಬಿಳ್ಳೂರ, ಡಾ. ಜಿನದತ್ತ ಹಡಗಲಿ, ನಾರಾಯಣ ಅ. ಕುಲಕರ್ಣಿ ಮೊದಲಾದವರು ವಿವಿಧ ಸಂಘಟನೆಗಳಿಂದ ಕವಿಮಿಲನದಲ್ಲಿ ಕವನಗಳನ್ನು ಓದಿದರು.




ಎರಡೂ ದಿನ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದೆಹಲಿ ಕರ್ನಾಟಕ ಸಂಘದ ತಂಡಗಳು ನೃತ್ಯ ಪ್ರದರ್ಶಿಸಿದವು. ಧಾರವಾಡದ ಶಿಲ್ಪಾ ನವಲಿಮಠ ಸುಗಮ ಸಂಗೀತ, ಕುಂದಗೋಳದ ಚಂದ್ರಶೇಖರ ಕಾಳೆ ತಂಡ ಜಾನಪದ ಹಾಡು ಪ್ರಸ್ತುತಪಡಿಸಿದರು. ಅಥಣಿಯ ರಾಧಾಬಾಯಿ ಮಾದರ ಲಾವಣಿ ಹಾಡು ಪ್ರೇಕ್ಷಕರನ್ನು ಮನತಣಿಸಿದವು. ನಂತರ ಧಾರವಾಡದ ಮಹಾದೇವ ಸತ್ತಿಗೇರಿ ಅವರ ಹಾಸ್ಯೋತ್ಸವ ನೆರೆದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿತು. ಅ

*ಅಭಿಮತ ವರದಿ*

# ಡಾ. ಸರೋಜಿನಿ ಮಹಿಷಿ ನಿಧನ



ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷೆ ಡಾ. ಸರೋಜಿನಿ ಮಹಿಷಿ (88) ಅವರು ಇದೇ ಜನವರಿ 25ರಂದು ಮುಂಜಾನೆ ಘಾಜಿಯಾಬಾದ್‌ನ ಮನೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಡಾ. ಮಹಿಷಿ ಅವರ ಅಂತ್ಯಕ್ರಿಯೆಯನ್ನು ಅವರ ಸಹೋದರ ಕರ್ನಾಟಕ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಶ್ರೀ ಪ್ರಹ್ಲಾದ್ ಬಿ. ಮಹಿಷಿ ಅವರು ದೆಹಲಿಯ ಲೋಧಿ ರಸ್ತೆಯಲ್ಲಿರುವ ಚಿತಾಗಾರದಲ್ಲಿ ನಡೆಸಿದರು.

ಜನವರಿ 26ರಂದು ದೆಹಲಿ ಕರ್ನಾಟಕ ಸಂಘ ಆವರಣದಲ್ಲಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

ಕೇಂದ್ರ ಕಾನೂನು ಸಚಿವ ಶ್ರೀ ಡಿ.ವಿ. ಸದಾನಂದ ಗೌಡ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ ಅನಂತ ಕುಮಾರ್, ಮಾಜಿ ರೈಲ್ವೇ ಮಂತ್ರಿ ಸಂಸದ ಶ್ರೀ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫೆರ್ನಾಂಡಿಸ್, ಮಾಜಿ ಕೇಂದ್ರ ಕಾನೂನು ಸಚಿವ ಶ್ರೀ ಎಂ. ವೀರಪ್ಪ ಮೊಯಿಲಿ, ಧಾರವಾಡದ ಸಂಸದ ಶ್ರೀ ಪ್ರಹ್ಲಾದ ಜೋಷಿ, ಶ್ರೀ ಸಿ.ಎಸ್. ಪುಟ್ಟರಾಜು, ರಾಜ್ಯಸಭಾ ಸದಸ್ಯರಾದ ಕುಪೇಂದ್ರ ರೆಡ್ಡಿ, ಕರ್ನಾಟಕ ಸರಕಾರದ ವಿಶೇಷ ಪ್ರತಿನಿಧಿ ಶ್ರೀ ಅಪ್ಪಾಜಿ ನಾಡಗೌಡ, ದೆಹಲಿ ಭೇಟಿಯಲ್ಲಿದ್ದ ಹಿರಿಯ ಚೇತನ ನಾಡೋಜ ಪಾಟೀಲ ಪುಟ್ಟಪ್ಪ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪದಾಧಿಕಾರಿಗಳು, ಸಮಿತಿ ಸದಸ್ಯರು ಮತ್ತು ದೆಹಲಿಯ ಅನೇಕ ಕನ್ನಡ ಬಂಧುಗಳು ಶ್ರದ್ಧಾಂಜಲಿ ಅರ್ಪಿಸಿದರು. ಅವರ ನಿಧನದ ಸುದ್ದಿ ತಿಳಿದು ಅವರ ನಿವಾಸಕ್ಕೆ ಭೇಟಿ ನೀಡಿದ್ದ ಕರ್ನಾಟಕ ಭವನದ ಸ್ಥಾನಿಕ ಆಯುಕ್ತೆ ವಂದನಾ ಗುರ್ನಾನಿ ಮತ್ತು ಜಂಟಿ ಆಯುಕ್ತ ಸುಪ್ರಸನ್ನ ಅವರು ಕೂಡಾ ಅಂತಿಮ ಗೌರವ ಸಲ್ಲಿಸಿದರು.

## ಕುಟುಂಬ

ಅವಿವಾಹಿತೆಯರಾಗಿದ್ದ ಡಾ. ಸರೋಜಿನಿ ಮಹಿಷಿ ಅವರು ದೆಹಲಿಯ ಗಡಿಪ್ರದೇಶದಲ್ಲಿರುವ ಉತ್ತರ ಪ್ರದೇಶದ ನಗರ ಘಾಜಿಯಾಬಾದಿನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಹಳೆ ಧಾರವಾಡ ಜಿಲ್ಲೆ ಶಿರಹಟ್ಟಿಯ ನ್ಯಾಯವಾದಿಗಳು ಹಾಗೂ ಸಂಸ್ಕೃತ ಪಂಡಿತರಾಗಿದ್ದ ಬಿಂದೂರಾವ್ ಅಚ್ಯುತಾಚಾರ್ಯ ಮಹಿಷಿ ಹಾಗೂ ಕಮಲಾಬಾಯಿ ದಂಪತಿಗಳಿಗೆ 1927ರ ಮಾರ್ಚ್ 3ರಂದು ಜನಿಸಿದ ಡಾ. ಮಹಿಷಿ ಅವರು ಎಂಟು ಮಕ್ಕಳಲ್ಲಿ ಎರಡನೆಯವರಾಗಿದ್ದರು. ಅವರಿಗೆ ಐವರು ಸಹೋದರಿಯರು ಹಾಗೂ ಇಬ್ಬರು ಸಹೋದರರಿದ್ದಾರೆ.

## ವಿದ್ಯಾಭ್ಯಾಸ

ಡಾ. ಮಹಿಷಿ ಅವರು ಐದನೆಯ ತರಗತಿಯವರೆಗೆ ಧಾರವಾಡದ ಸರಕಾರಿ ಶಾಲೆಯಲ್ಲಿ ಓದಿದರು. ನಂತರ ಕರ್ನಾಟಕ ಹೈಸ್ಕೂಲಿನಲ್ಲಿ ಎಸೆಸ್ಸೆಲ್ಸಿವರೆಗೆ ಓದಿದರು.

ಅವರ ತಂದೆಯವರು ವಕೀಲಿ ವೃತ್ತಿಯನ್ನು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಆರಂಭಿಸಿದ್ದರಿಂದ ಕುಟುಂಬದೊಂದಿಗೆ ಬಂದ ಡಾ. ಮಹಿಷಿ ಅವರು ಸಾಂಗ್ಲಿಯ ವಿಲ್ಲಿಂಗ್‌ಡನ್ ಕಾಲೇಜಿಗೆ ಸೇರಿ ಬಿ.ಎ. ಪದವಿಯನ್ನು ಪಡೆದರು. ನಂತರ ಕನ್ನಡ ಮತ್ತು ಸಂಸ್ಕೃತ ವಿಷಯದಲ್ಲಿ ಎಂಎ ಪದವಿಯನ್ನು ಪಡೆದುಕೊಂಡಿದ್ದರು. ಸ್ನಾತಕೋತ್ತರ ಪದವಿಯ ಅಧ್ಯಯನ ಕಾಲದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ರಂ.ಶ್ರೀ. ಮುಗಳಿಯವರ ಪರಿಚಯದಿಂದ ಡಾ. ಮಹಿಷಿ ಅವರ ಅಧ್ಯಯನಾಸಕ್ತಿ ಬೆಳೆಯಿತು.

ಡಾ. ಮಹಿಷಿಯವರು ಸ.ಸ. ಮಾಳವಾಡರ ಮಾರ್ಗದರ್ಶನದಲ್ಲಿ ಕನ್ನಡ ಕವಯಿತ್ರಿಯರು ಎಂಬ ಪ್ರೌಢ ಪ್ರಬಂಧವನ್ನು ರಚಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ 1961ರಲ್ಲಿ ಸಲ್ಲಿಸಿದರು. ಈ ಮಹಾಪ್ರಬಂಧವು ಕರ್ನಾಟಕದ ಕವಯಿತ್ರಿಯರನ್ನು ಪರಿಚಯಿಸುವ ಮೊದಲ ಪ್ರಯತ್ನವಾಗಿರುವುದನ್ನು ಗುರುತಿಸಿದ ಉಜ್ಜಯಿನಿಯ ವಿಕ್ರಂ ವಿಶ್ವವಿದ್ಯಾಲಯವು ಡಿ.ಲಿಟ್.ಪದವಿ ನೀಡಿದೆ.

ಡಾ. ಮಹಿಷಿಯವರು ಬೆಳಗಾವಿಯ ಆರ್.ಎಲ್.ಎಸ್. ಕಾಲೇಜಿನಲ್ಲಿ ಕಾನೂನು ಅಧ್ಯಯನ ಮಾಡಿ 1955ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಥಮ ರ‍್ಯಾಂಕ್ ಪಡೆದು ತೇರ್ಗಡೆಯಾದರು. ನಂತರ ಧಾರವಾಡದ ಜನತಾ ಲಾ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಕೆಲಕಾಲ ಕಾರ್ಯ ನಿರ್ವಹಿಸಿದರು. ಧಾರವಾಡದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ ಬಾರ್ ಕೌನ್ಸಿಲ್ ಪರೀಕ್ಷೆಗೆ ಕುಳಿತು ಪ್ರಥಮ ಸ್ಥಾನ ಗಳಿಸಿದ ಮಹಿಳೆಯಾದರು. ಅವರು ಮುಂಬೈಯಲ್ಲಿ ಡಿಪ್ಲೊಮ ಇನ್ ಹೋಮಿಯೋಪತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಿಸರ್ಗ ಚಿಕಿತ್ಸೆಯನ್ನು ಕಲಿತರು.

## ಸಾಹಿತ್ಯ

ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ ಮತ್ತು ಕುವೆಂಪು ಅವರ ರಾಮಾಯಣ ದರ್ಶನಂ ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದರು. ಡಾ. ಮಹಿಷಿ ಅವರು ಸಾಹಿತ್ಯಾಭ್ಯಾಸಿಯಾಗಿ ಬರವಣಿಗೆಯಲ್ಲಿ ನಿರತರಾಗಿದ್ದು ಹಲವಾರು ಕವನಗಳನ್ನು, ಮಕ್ಕಳ ಕವಿತೆಗಳನ್ನು ರಚಿಸಿದ್ದರು. ಅವರು ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ತಮಿಳು, ಕೊಂಕಣಿ ಭಾಷೆಗಳಲ್ಲೂ ಪ್ರಭುತ್ವ ಪಡೆದಿದ್ದರು. ರಾಜ್ಯಮಹಿಳಾ ಶಿಕ್ಷಣ ಮಂಡಲಿ, ಕೇಂದ್ರ ಶಿಕ್ಷಣ ಸಲಹಾ ಮಂಡಲಿಗಳ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಸಂಸದೀಯ ಹಿಂದಿ ಪರಿಷತ್ತಿನ ಅಧ್ಯಕ್ಷೆಯಾಗಿ, ಧಾರವಾಡದ ವನಿತಾ ಶಿಕ್ಷಣ ಸಂಸ್ಥೆಗಳ

ಅಧ್ಯಕ್ಷೆಯಾಗಿ, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಉಪಾಧ್ಯಕ್ಷೆಯಾಗಿ, ಹಲವಾರು ಹುದ್ದೆಗಳಲ್ಲಿ ಶೈಕ್ಷಣಿಕ ಉನ್ನತಿಗಾಗಿ ದುಡಿದರು.

### ಪುರಸ್ಕಾರ

ಡಾ. ಮಹಿಷಿ ಅವರ ನವಿಲು, ಇಂಚರ ಎನ್ನುವ ಮಕ್ಕಳ ಸಾಹಿತ್ಯಕ್ಕಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಳ್ಳು ಗುಲಾಬಿ ಮಕ್ಕಳ ಕವನ ಸಂಕಲನಕ್ಕೆ ರಾಜ್ಯ ಸರಕಾರದ ಬಹುಮಾನ, ಪುಣೆಯ ಸಮೀರ ಸಂವರ್ನಿ ಸಂಸ್ಕೃತ ಸಭಾದಿಂದ 'ವಿದ್ವತ್‌ರತ್ನ', ಉಡುಪಿ ಪೇಜಾವರ ಶ್ರೀಗಳಿಂದ 'ಕರ್ನಾಟಕ ಸರಸ್ವತಿ', ಅಖಿಲ ಭಾರತ ಹಿಂದಿ ಸಾಹಿತ್ಯಸಭಾ ಕುರುಕ್ಷೇತ್ರದಿಂದ 'ಸಾಹಿತ್ಯವಾಚಸ್ಪತಿ', ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ನಾಡೋಜ ಪ್ರಶಸ್ತಿ' ಮುಂತಾದ ಗೌರವಗಳು ಡಾ. ಮಹಿಷಿ ಅವರಿಗೆ ಸಂದಿವೆ.

### ರಾಜಕೀಯ ಬದುಕು

ಗಾಂಧೀಜಿಯವರ ಅಸಹಕಾರ ಚಳವಳಿಯು ಅವರಿಗೆ ವಿದ್ಯಾರ್ಥಿ ಜೀವನದಿಂದಲೇ ರಾಜಕೀಯದಲ್ಲಿ ಆಸಕ್ತಿ ಹುಟ್ಟಿಸಿ ಅವರನ್ನು ದೇಶ ಸೇವೆಯತ್ತ ಸೆಳೆಯಿತು. ಉತ್ತಮ ವಾಗ್ಮಿಯಾಗಿದ್ದ ಡಾ. ಮಹಿಷಿ ಅವರು 1966ರ ಧಾರವಾಡಕ್ಕೆ ಭೇಟಿ ನೀಡಿದ್ದ ಇಂದಿರಾಗಾಂಧಿ ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಚುರುಕುತನವನ್ನು ಮೆಚ್ಚಿದ ಇಂದಿರಾ ಗಾಂಧಿ ಅವರು ಡಾ. ಮಹಿಷಿ ಅವರನ್ನು ದೆಹಲಿಗೆ ಕರೆಯಿಸಿಕೊಂಡರು. ನಂತರ ಅವರು ಅಂದು ಕೇವಲ 10 ಸಾವಿರ ರೂಪಾಯಿ ಖರ್ಚು ಮಾಡಿ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದ್ದರು. ಡಾ. ಮಹಿಷಿ ಅವರು 1966ರಿಂದ ಸತತವಾಗಿ ನಾಲ್ಕು ಬಾರಿ ಧಾರವಾಡ ಕ್ಷೇತ್ರದಿಂದ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಎರಡು ಸಲ ರಾಜ್ಯಸಭಾ ಸದಸ್ಯೆ ಮತ್ತು ರಾಜ್ಯ ಸಭೆಯ ಉಪಸಭಾಪತಿಯಾಗಿಯೂ ಕೆಲಸ ನಿರ್ವಹಿಸಿದ್ದರು. ಇಂದಿರಾ ಗಾಂಧಿ ಅವರ ಸಚಿವ ಸಂಪುಟದಲ್ಲಿ ವಿಮಾನಯಾನ, ಕಾನೂನು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರಾಗಿ ಕೆಲಸ ಮಾಡಿದ್ದರು.

### ಸರೋಜಿನಿ ಮಹಿಷಿ ವರದಿ

ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 1983 ರಲ್ಲಿ ಕರ್ನಾಟಕದಲ್ಲಿ ರೈಲ್ವೇ ಇಲಾಖೆ ಮತ್ತು ಸಾರ್ವಜನಿಕ ವಲಯದಲ್ಲಿ ಕನ್ನಡಿಗರಿಗೆ ದೊರೆಯುವ ಉದ್ಯೋಗಾವಕಾಶಗಳನ್ನು ಪರಿಶೀಲಿಸುವಂತೆ ಡಾ. ಮಹಿಷಿ ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಈ ಕುರಿತು ರಾಜ್ಯಾದ್ಯಂತ ಸಂಚರಿಸಿ ಅಧ್ಯಯನ ನಡೆಸಿದ ಸಮಿತಿ, ಸರಕಾರಿ ಸ್ವಾಮ್ಯದ ಮತ್ತು ಖಾಸಗಿ ಕಂಪನಿಗಳ ಹುದ್ದೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡುವ ಬಗ್ಗೆ ಒಟ್ಟು 59 ಶಿಫಾರಸುಗಳನ್ನು ಮಾಡಿತ್ತು. ಇಂದಿಗೂ ಅದು ಸರೋಜಿನಿ ಮಹಿಷಿ ವರದಿ ಎಂದೇ ಖ್ಯಾತವಾಗಿದೆ. ಅದರಲ್ಲಿ ರಾಜ್ಯ ಸರಕಾರವು 45 ಶಿಫಾರಸುಗಳನ್ನು ಅಂಗೀಕರಿಸಿತ್ತು. ಅ

*ಅಭಿಮತ ವರದಿ*

## ಡಾ. ಸರೋಜಿನಿ ಮಹಿಷಿ ಅವರಿಗೆ ಹೃದಯಪೂರ್ವಕ ಶ್ರದ್ಧಾಂಜಲಿ

ಜನವರಿ 25ರಂದು ಮಧ್ಯಾಹ್ನ ವಾರ್ತೆಗಳನ್ನು ಕೇಳುತ್ತಿದ್ದಾಗ ಡಾ. ಸರೋಜಿನಿ ಮಹಿಷಿಯವರು ದೆಹಲಿಯ ಘಾಜಿಯಾಬಾದ್‌ನ ತಮ್ಮ ಮನೆಯಲ್ಲಿ ಸ್ವರ್ಗಸ್ಥರಾದ ವಿಷಯ ತಿಳಿಯಿತು. ಕನ್ನಡಿಗರಿಗೆ, ವಿಶೇಷವಾಗಿ ದೆಹಲಿ ಕನ್ನಡಿಗರಿಗೆ ತುಂಬಲಾರದ ಹಾನಿಯಾಗಿದೆ. ಡಾ. ಮಹಿಷಿ ಅವರು ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದಾಗ ತಮ್ಮ ಸ್ತ್ರೀಶಕ್ತಿ ಹಾಗೂ ಕನ್ನಡದ ಕೈಂಕರ್ಯದಿಂದ ಕಷ್ಟಪಟ್ಟು ದೆಹಲಿ ಕರ್ನಾಟಕ ಸಂಘದ ಕಟ್ಟಡದ ಅಡಿಪಾಯ (1972) ಹಾಕಿ, ಅಂದಿನ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರ ಅಮೃತ ಹಸ್ತಗಳಿಂದ ಸಂಘವನ್ನು (1977) ಉದ್ಘಾಟಿಸಿದರು.

ಮುಂದೆ ಕೆ.ಆರ್. ನಾಗರಾಜ ಅವರು ಮುತುವರ್ಜಿವಹಿಸಿ ಹಳೆಯ ಕಟ್ಟಡವನ್ನು ಕೆಡವಿ ಈಗಿರುವ ಹೊಸ ಕಟ್ಟಡ ಮೇಲೇಳಲು ವಿಶೇಷ ಶ್ರಮಪಟ್ಟರು. ನಂತರ ಡಾ. ಪುರುಷೋತ್ತಮ ಬಿಳಿಮಲೆಯವರು ಅಧ್ಯಕ್ಷರಾಗಿದ್ದಾಗ ಹೊಸಕಟ್ಟಡದ (2005) ಪ್ರಾರಂಭೋತ್ಸವವಾಯಿತು. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಕಸ್ತೂರಿಯ ಪರಿಮಳದ ವಾಸನೆಯನ್ನು ಹರಡಲು, ನಾಡ ನುಡಿಯನ್ನು ಬೆಳೆಸಿ–ಬೆಳಗಿಸಲು ಹಾಗೂ ನಾಡ ದೇವತೆ ಭುವನೇಶ್ವರಿಯ ಧ್ವಜವನ್ನು ಹಾರಿಸಲು ಶ್ರಮಿಸಿದ ಹಲವಾರು ವ್ಯಕ್ತಿಗಳಲ್ಲಿ ಡಾ. ಮಹಿಷಿಯವರು ಅಗ್ರಗಣ್ಯರು. ಅವರು ಕೇವಲ ದೆಹಲಿ ಕರ್ನಾಟಕ ಸಂಘಕ್ಕೆ ಮಾತ್ರವಲ್ಲ, ದೆಹಲಿ ಕನ್ನಡ ಶಾಲೆ ಹಾಗೂ ಆರ್.ಕೆ. ಪುರಂನಲ್ಲಿರುವ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠವು ದೆಹಲಿಯಲ್ಲಿ ತಲೆ ಎತ್ತಿ ನಿಲ್ಲಲು ಕಾರಣವಾಗಿದ್ದಾರೆ. ಅದೆಷ್ಟೋ ಜನ ಕನ್ನಡಿಗರಿಗೆ ನೆಲೆಯಾಗಲು ನೌಕರಿ ಕೊಡಿಸಿದ್ದಾರೆ. ತಮಗಾಗಿ ಯಾವ ಆಸ್ತಿಪಾಸ್ತಿ ಮಾಡಿಕೊಳ್ಳದೇ ನಿಸ್ವಾರ್ಥ ಸೇವೆ ಮಾಡಿದ್ದಾರೆ.
ಡಾ. ಮಹಿಷಿಯವರ ಭಾವಚಿತ್ರವನ್ನು ಸಂಘದಲ್ಲಿ ಹಾಕಬೇಕು ಹಾಗೂ ಸಂಘದ ಸಭಾಂಗಣಕ್ಕೆ "ಡಾ. ಸರೋಜಿನಿ ಮಹಿಷಿ ಸಭಾಂಗಣ"ವೆಂದು ನಾಮಕರಣ ಮಾಡಿ ನಾವು ಅವರನ್ನು ಗೌರವಿಸಬೇಕು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಅ

*ಸುಧಾಕರ ಕುರಂದವಾಡ*

## ಡಾ. ಸರೋಜಿನಿ ಮಹಿಷಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ನಾನು ದೂರದರ್ಶನದಲ್ಲಿ ದೆಹಲಿಯಲ್ಲಿ ಹೃದಯಾಘಾತದಿಂದ ಮೃತಪಟ್ಟ ಡಾ. ಸರೋಜಿನಿ ಮಹಿಷಿಯವರ ವಿಷಯ ನೋಡಿ ದುಃಖಿತಳಾಗಿ ತಕ್ಷಣ ದಿನಪತ್ರಿಕೆ ಖರೀದಿಸಿ ಓದಿದೆ. ನಮ್ಮ ತಾಯಿಯವರೊಂದಿಗೆ ಧಾರವಾಡದಲ್ಲಿದ್ದಾಗ, ಒಡನಾಟ ಹೊಂದಿ, ಗೆಳತಿಯವರಾಗಿದ್ದ ವಿಷಯಗಳನ್ನು ಕೇಳಿದ್ದು ನೆನಪಾಯಿತು. ನಮ್ಮ ತಾಯಿಯವರು ಮರಣ ಹೊಂದಿದಾಗ ದುಃಖಪತ್ರವನ್ನು ಬರೆದಿದ್ದರು. ನನಗನ್ನಿಸುವ ಮಟ್ಟಿಗೆ 20ನೇ ಶತಕದ ಮೊದಲಿನ 50 ವರ್ಷಗಳಲ್ಲಿ ಹುಟ್ಟಿದ ಬಹುತೇಕ ಮಂದಿ ತುಂಬಾ ಬುದ್ಧಿವಂತರು, ಸ್ವಾಭಿಮಾನಿಗಳು, ಅಂತಃಕರಣಿಗಳು, ದೂರದೃಷ್ಟಿಯುಳ್ಳವರು, ಹೊಸ ವಿಚಾರದವರು, ಅನೇಕ ಭಾಷಾ ಪಂಡಿತರು ಎನಿಸುತ್ತದೆ.

ಮಾಜಿ ರಾಷ್ಟ್ರಪತಿಯವರಾದ ಡಾ. ಬಿ.ಡಿ. ಜತ್ತಿಯವರೊಡಗೂಡಿ, ಸಂಸದೆಯಾಗಿ ನವದೆಹಲಿಯಲ್ಲಿ ಕರ್ನಾಟಕ ಸಂಘದ ಸ್ಥಾಪನೆಯ ಮೂಲಕರ್ತೃಗಳಾಗಿ, ಕನ್ನಡಿಗರಿಗೆ ಆಶ್ರಯದಾತೆ, ಅನ್ನದಾತೆಯವರಾಗಿ ಅನೇಕ ಚಟುವಟಿಕೆಗಳಲ್ಲಿ ಪ್ರಮುಖಪಾತ್ರವಹಿಸುವ ಈಗಿನ ಸುಸಜ್ಜಿತ ನವದೆಹಲಿಯ ಕರ್ನಾಟಕ ಸಂಘದ ಮೂಲಸ್ಥಾಪಕಿಯಾಗಿ, ಲೇಖಕಿಯಾಗಿ, ಅಧ್ಯಕ್ಷೆಯಾಗಿ ಅನೇಕ ರಂಗಗಳಲ್ಲಿ ಮಿಂಚಿ ಈಗ ಇಹಲೋಕ ತ್ಯಜಿಸಿದ ಡಾ. ಮಹಿಷಿಯವರಿಗೆ ಏನೆಂದು ಕೃತಜ್ಞತೆ ಸಲ್ಲಿಸಲಿ?
ಸರೋವರದಷ್ಟು ಆಳವಾದ ಜ್ಞಾನ
ಭೀಷ್ಮನಂತ ಬ್ರಹ್ಮಚಾರಿ
ಛಲವಂತೆ, ಸ್ವಾಭಿಮಾನಿ
ಮಹಿಷಿ ವರದಿ ಸಿದ್ಧಪಡಿಸಿದ
ವಿಚಾರವಾದಿ
ಕನ್ನಡಿಗರ ಬಾಳಿನ ಬೆಳಕಾಗಲು
ಹೋರಾಡಿ
ಅನೇಕ ಸಿಹಿ, ಕಹಿ ಘಟನೆ ಅನುಭವಿಸಿ
ಕೊನೆಗೆ ಏಕಾಂಗಿಯಾಗಿ ಯಾರಿಗೂ
ಅವಲಂಬನವಾಗದೆ
ಕೊನೆಯುಸಿರೆಳೆದ ಆ ಮಹಾತಾಯಿಗೆ
ನಮೋನ್ನಮಃ ಅ

*ಡಾ. ಸುಮಂಗಲಾದೇವಿ*



# ಕನ್ನಡವನ್ನೇ ಉಸಿರಾಡುವ ಸರೋಜಿನಿ ಮಹಿಷಿ

ಕನ್ನಡಪರ ಯೋಜನೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಮತ್ತು ವಿವಿಧ ಮಾಧ್ಯಮಗಳಲ್ಲಿ ನೂರಾರು ಬಾರಿ ಸ್ಮರಿಸುವ 'ಮಹಿಷಿ ವರದಿ' ಖ್ಯಾತಿಯ ಡಾ. ಸರೋಜಿನಿ ಮಹಿಷಿಯವರನ್ನು ನಾನು ಮೊದಲ ಬಾರಿ ಕಂಡಿದ್ದು 2005ರಲ್ಲಿ. ಆನಂತರ ಅವರ ನೇರ ಸಂಪರ್ಕಕ್ಕೆ ಬರುವ ಅವಕಾಶ ದೊರಕಿತು.

ಐದು ದಶಕಗಳ ಹಿಂದೆ ದಿ. ಇಂದಿರಾ ಗಾಂಧಿಯವರನ್ನು ಹೊರತುಪಡಿಸಿದರೆ ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವಿ ಮಹಿಳೆಯರಾಗಿ ಹೊರ ಹೊಮ್ಮಿದವರು ಕನ್ನಡತಿ ಡಾ. ಸರೋಜಿನಿ ಮಹಿಷಿ. ಕೇಂದ್ರ ಸಚಿವೆಯಾಗಿ ಮತ್ತು ರಾಜ್ಯಸಭಾ ಉಪಸಭಾಪತಿಯಾಗಿ ಮಹಿಷಿ ಮುಂಚೂಣಿಯಲ್ಲಿದ್ದವರು.

ರಾಜಕಾರಣದಲ್ಲಿ ಅಪ್ರತಿಮ ನಾಯಕಿಯಾಗಿದ್ದರೂ ಮಹಿಷಿಯವರ ಕರ್ನಾಟಕ ಮತ್ತು ಕನ್ನಡದ ಬಗೆಗಿನ ಪ್ರೀತಿ ಪ್ರಶ್ನಾತೀತವಾದದ್ದು. ಭಾಷೆ ಮತ್ತು ಸಂಸ್ಕೃತಿಯ ಕುರಿತ ಆಳವಾದ ಅಧ್ಯಯನದ ಜೊತೆಗೆ ಅವರು ಮಾತು ಮತ್ತು ಕೃತಿಗಳ ಮೂಲಕ ನೀಡಿದ ಕೊಡುಗೆ ಅನನ್ಯ. ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘ ಸ್ವಂತ ನೆಲೆಯೊಂದಿಗೆ ತಲೆ ಎತ್ತಲು ಹಾಗೂ ರಾಷ್ಟ್ರ ರಾಜಧಾನಿಯ ಕೇಂದ್ರ ಭಾಗದಲ್ಲಿ ಅದು ಭೂಮಿಯನ್ನು ಪಡೆಯಲು ಮಹಿಷಿ ಕಾರಣರಾಗಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷೆಯಾಗಿ ಸುಧೀರ್ಘ ಕಾಲ ಸೇವೆ ಸಲ್ಲಿಸಿ, ಅಲ್ಲಿನ ಆಂತರಿಕ ಕಲಹದಿಂದ ದೂರವಾಗಿದ್ದ ಮಹಿಷಿ ನಂತರ ಅಲ್ಲಿ ಕಾಲಿರಿಸಿದ್ದು ಎರಡು ದಶಕಗಳ ನಂತರ. ಇದು ವಿಷಾದನೀಯ. ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ 2005ರಲ್ಲಿ ಉದ್ಘಾಟನೆಗೊಂಡಿತು. ಈ ಸಂದರ್ಭ ಸಮಾರೋಪ ಸಮಾರಂಭದಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡಲು ಅಂದಿನ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಯಶಸ್ವಿಯಾಗಿದ್ದರು.

ತಮಿಳರು ಮತ್ತು ಇತರ ಭಾಷಿಕರು ರಾಜಧಾನಿಯಲ್ಲಿ ಅನೇಕ ಸಂಘ ಸಂಸ್ಥೆಗಳನ್ನು ಹೊಂದಿದ್ದರೂ, ಕನ್ನಡಿಗರಿಗೆ ಇರುವ ಒಂದು ಶಾಲೆ ಮತ್ತು ಸಂಘವನ್ನು ಯೋಗ್ಯ ರೀತಿಯಲ್ಲಿ ಮುನ್ನಡೆಸಲು ಸಾಧ್ಯವಾಗದ ಕುರಿತು ಅಂದು ಹೇಳುವಾಗ ಮಹಿಷಿಯವರು ಭಾವುಕರಾಗಿದ್ದರು. ಕನ್ನಡಿಗರ ಒಳ ಜಗಳದ ಬಗೆಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಸಂಘ 2006ರಲ್ಲಿ 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ಎಂಬ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಆ ಸಂಕಿರಣದ ಉದ್ಘಾಟನಾ ಭಾಷಣ ಮಾಡಿದ ಸರೋಜಿನಿ ಮಹಿಷಿಯವರು ಹಲವು ಶತಮಾನಗಳಿಂದ ಮಹಿಳೆ ಕನ್ನಡ ಸಾಹಿತ್ಯದಲ್ಲಿ ತೊಡಗಿಸಿಕೊಂಡ ಬಗೆಯನ್ನು ವಿವರಿಸಿದ ರೀತಿ ಅನನ್ಯವಾಗಿತ್ತು. ಒಂದು ತಾಸಿಗಿಂತಲೂ ಹೆಚ್ಚು ಮಾತನಾಡಿದ ಅವರು ವಚನ ಸಾಹಿತ್ಯ, ದಾಸ ಸಾಹಿತ್ಯ ಅಲ್ಲದೆ ಆಧುನಿಕ ಯುಗದ ಮಹಿಳಾ ಸಾಹಿತಿಗಳನ್ನು ನೆನೆದು, ಅವರ ಕಾವ್ಯದ ಸಾಲುಗಳನ್ನು ನಿರರ್ಗಳವಾಗಿ ಹೇಳಿ ಅಚ್ಚರಿ ಮೂಡಿಸಿದರು. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಅವರಿಗೆ ಇದ್ದ ಪಾಂಡಿತ್ಯ ಅಲ್ಲಿ ವ್ಯಕ್ತವಾಗಿತ್ತು.

ಮಹಿಷಿಯವರು ಅಂದು ಮಾಡಿದ ಸ್ಮರಣೀಯ ಭಾಷಣವನ್ನು ನಾನು ಬರಹ ರೂಪಕ್ಕೆ ತಂದೆ. ಅದು ಮುಂದೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದ 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ಕೃತಿಯಲ್ಲಿ ಪ್ರಕಟವಾಯಿತು. ಡಾ. ಸಬಿಹಾ ಭೂಮಿಗೌಡ ಮತ್ತು ಡಾ. ಮಲ್ಲಿಕಾ ಘಂಟಿ ಕೃತಿಯ ಸಂಪಾದಕರು. ಅದಕ್ಕೂ ಮೊದಲು ಕೆಲವು ವಿಷಯಗಳನ್ನು ಸ್ಪಷ್ಟಪಡಿಸಿಕೊಳ್ಳಲು ನಾನು ಮಹಿಷಿಯವರನ್ನು ಭೇಟಿಯಾಗಿ ಚರ್ಚಿಸಿದ್ದೆ. ಮಹಿಷಿಯವರಿಗೆ ಆತ್ಮೀಯರಾಗಿದ್ದ ಅಂದಿನ ಕರ್ನಾಟಕ ಭವನದ ನಿವಾಸಿ ಆಯುಕ್ತರಾಗಿದ್ದ ಶ್ರೀ ಎಸ್.ಆರ್. ಗಾರವಾಡ ಅವರು ಅವರ ಮನೆಯಲ್ಲಿ ನಮ್ಮ ಭೇಟಿಗೆ ಅವಕಾಶ ಕಲ್ಪಿಸಿದ್ದರು. ಮಾತುಕತೆಯಲ್ಲಿ ನನಗೆ ವಿಶೇಷವಾಗಿ ಕಂಡಿದ್ದು ಅವರ ಸ್ಮರಣಶಕ್ತಿ.

ಮುಂದೆ 2011 ರಲ್ಲಿ ಜನಕಪುರಿ ಕನ್ನಡಕೂಟದ ವಾರ್ಷಿಕ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಡಾ. ಸರೋಜಿನಿ ಮಹಿಷಿ ಬಂದಿದ್ದರು. ಅಂದು ಸನ್ಮಾನಿತರು ಸೇರಿದಂತೆ ಹಲವರು ಮಾತನಾಡಿದರು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಹಳ ಸಮಯದ ಬಳಿಕ ಮಹಿಷಿ ಅವರಿಗೆ ಮಾತನಾಡುವ ಸರದಿ. ಸನ್ಮಾನಿತರ ಬಗೆಗೆ ಅಥವಾ ಕನ್ನಡ ಕೂಟದ ಕುರಿತು ಅವರು ಮಾತನಾಡುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ. ಆದರೆ ಅವರು ಕನ್ನಡ ಮತ್ತು ಇತರ ಭಾಷೆಗಳ ನಡುವಿನ ಬಾಂಧವ್ಯದ ಕುರಿತು ಮಾತನಾಡಿ ಅಚ್ಚರಿಗೊಳಿಸಿದರು. 'ಓಜ' ಎಂಬುದು ಸಂಸ್ಕೃತ ಶಬ್ದವಾಗಿದ್ದು, ಅದರ ಅರ್ಥ 'ಉಪಾಧ್ಯಾಯ' ಎಂಬುದಾಗಿ ತಿಳಿಸುತ್ತಾ ಒಂದು ಸ್ವಾರಸ್ಯಕರ ಉಪನ್ಯಾಸವನ್ನೇ ನೀಡಿದರು. ಇದು ಮಹಿಷಿಯವರು ಭಾಷೆಯ ಕುರಿತು, ಮುಖ್ಯವಾಗಿ ಕನ್ನಡದ ಕುರಿತು ಸದಾ ಚಿಂತಿಸುವ ಪರಿಗೆ ನಿದರ್ಶನ.

ಈ ಕಾರ್ಯಕ್ರಮ ಮುಗಿದ ಬಳಿಕ ನಾನು ಮಾತನಾಡುತ್ತಾ ಮರುದಿನ ದೆಹಲಿ ಕರ್ನಾಟಕ ಸಂಘದಲ್ಲಿ ಕುವೆಂಪು ಕುರಿತು ವಿಚಾರಗೋಷ್ಠಿ ಇರುವ ವಿಷಯ ತಿಳಿಸಿದೆ. ಅವರು ಖುಷಿಯಾಗಿ 'ನೋಡ್ರಿ ಅವನೀಂದ್ರನಾಥ್. . . ನಾನು ಬಹಳ ಹಿಂದೆಯೇ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಯನ್ನು ಹಿಂದಿಗೆ ಅನುವಾದಿಸಿದ್ದೆ' ಎಂದರು. ಮರುದಿನ ಗೋಷ್ಠಿಯೊಂದನ್ನು ನಿರ್ವಹಿಸುವ ವೇಳೆ ನಾನು ಈ ವಿಷಯವನ್ನು ಮರೆಯದೆ ಸ್ಮರಿಸಿದೆ.

ರಾಜಕಾರಣದಲ್ಲಿದ್ದು ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ ವಿರಳ ವ್ಯಕ್ತಿಗಳಲ್ಲಿ ಮಹಿಷಿ ಒಬ್ಬರು. ಅವರು ಕನ್ನಡವನ್ನೇ ಉಸಿರಾಡುತ್ತಾರೆ ಎಂದು ನನ್ನ ಭಾವನೆ. ದೆಹಲಿ ಕರ್ನಾಟಕ ಸಂಘಕ್ಕೆ ಪ್ರತಿ ಬಾರಿ ಚುನಾವಣೆ ನಡೆದಾಗಲೂ ತಪ್ಪದೆ ಬಂದು ಮತ ಚಲಾಯಿಸುವ ಮಹಿಷಿಯವರ ಕನ್ನಡದ ಕುರಿತ ಕಳಕಳಿ ಮತ್ತು ಬದ್ಧತೆ ಅಸಾಧಾರಣವಾದದ್ದು. ಅ

***ಡಾ. ವೈ. ಅವನೀಂದ್ರನಾಥ್ ರಾವ್***

(ಸದ್ಯದಲ್ಲೇ ಬಿಡುಗಡೆಯಾಗಲಿರುವ ಡಾ. ವೈ. ಅವನೀಂದ್ರನಾಥ್ ಅವರ 'ದೆಹಲಿಯ ಕನ್ನಡ ಜಗತ್ತಿನಲ್ಲಿ' ಕೃತಿಯಿಂದ)

# ಡಾ. ಸರೋಜಿನಿ ಮಹಿಷಿ- ಕಳೆಗುಂದದ ಕೆಲವು ನೆನಪುಗಳು

**ಸಂಘದ ಜತೆಗಿನ ನಂಟನ್ನು ಕಳೆದುಕೊಂಡಿದ್ದ ಡಾ. ಸರೋಜಿನಿ ಮಹಿಷಿ ಅವರನ್ನು ಮತ್ತೆ ಸಂಘದತ್ತ ಬರುವಂತೆ ಮಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಹಿಷಿ ಜತೆಗಿನ ಕೆಲವು ಕ್ಷಣಗಳನ್ನು ನೆನಪು ಮಾಡಿದ್ದಾರೆ.**

ದೆಹಲಿ ಕರ್ನಾಟಕ ಸಂಘಕ್ಕೊಂದು ಭದ್ರವಾದ ಬುನಾದಿ ಹಾಕಿಕೊಟ್ಟ ಡಾ. ಸರೋಜಿನಿ ಮಹಿಷಿ ಅವರು ಇನ್ನಿಲ್ಲವೆಂಬ ಸುದ್ದಿ ತಲುಪಿದಾಗ ನಾನು ವಾಷಿಂಗ್ಟನ್‌ನಲ್ಲಿದ್ದೆ. ಯಾಕೋ ಮನಸು ತುಂಬಾ ಭಾರವಾಯಿತು. ಹೋಟೆಲ್‌ನ ಹೊರಗಡೆ ತುಂಬಾ ಚಳಿಯಿತ್ತಾದರೂ ಮೆಲ್ಲನೆ ಹೊರಗೆ ಕಾಲಿಟ್ಟೆ. ವಾಷಿಂಗ್ಟನ್‌ನ ವಿಶಾಲವಾದ ನಿರ್ಜನ ರಸ್ತೆಯಲ್ಲಿ ಭಾರವಾದ ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿದ್ದಂತೆ ಮಹಿಷಿ ಗಾಢವಾಗಿ ಆವರಿಸಿಕೊಂಡರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕರ್ನಾಟಕ ಎಂಬ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮಹಿಷಿಯವರು ಕನ್ನಡ ಸಾಹಿತ್ಯದಲ್ಲಿ ಮಹಿಳೆ ಎಂಬ ವಿಷಯದ ಕುರಿತು ಮಾಡಿದ ಸಂಶೋಧನೆಯ ಕುರಿತು ನನಗೆ ಮಾಹಿತಿ ಲಭ್ಯವಾಗಿತ್ತು. ಪಂಪ ಪೂರ್ವಯುಗದಿಂದ ತೊಡಗಿ, ಹೆಳವನಕಟ್ಟೆ ಗಿರಿಯಮ್ಮನ ವರೆಗೆ ಅವರು ನೀಡಿದ ಮಾಹಿತಿ ಮತ್ತು ವಿಶ್ಲೇಷಣೆ ತುಂಬಾ ಪರಿಣಾಮಕಾರಿಯಾಗಿತ್ತು. ಈ ನೆನಪು ಎಷ್ಟು ಗಾಢವಾಗಿ ಉಳಿಯಿತೆಂದರೆ ಮುಂದೆ ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜೊತೆ ಸೇರಿ ನಡೆಸಿದ 'ಕನ್ನಡ ಸಾಹಿತ್ಯದಲ್ಲಿ ಮಹಿಳೆ' ವಿಚಾರ ಸಂಕಿರಣಕ್ಕೆ ಅವರನ್ನು ನಾವು ಆಹ್ವಾನಿಸಿದೆವು. ತುಂಬಾ ಸಂತೋಷದಿಂದ ಅದಕ್ಕೆ ಒಪ್ಪಿಕೊಂಡ ಅವರು ಎರಡು ದಿನವೂ ನಮ್ಮೊಡನಿದ್ದರು ಮಾತ್ರವಲ್ಲ ಆ ಇಳಿ ವಯಸ್ಸಿನಲ್ಲೂ ತಾನು ಮಾಡಿದ ಸಂಶೋಧನೆಯ ಫಲಿತಗಳನ್ನು ನೆನಪು ಮಾಡಿಕೊಂಡು ಕಂತಿ, ಅತ್ತಿಮಬ್ಬೆ, ಅಕ್ಕ ಮಹಾದೇವಿ, ಸಂಚಿಯ ಹೊನ್ನಮ್ಮ ಮೊದಲಾದವರ ಬಗೆಗೆ ಉತ್ಸಾಹದಿಂದ ಮಾಹಿತಿಗಳನ್ನು ನೀಡಿದ್ದರು. ಪ್ರಾಚೀನ ಕವಿಗಳ ಅನೇಕ ಸಾಲುಗಳನ್ನು ನಿರರ್ಗಳವಾಗಿ ಉದ್ಧರಿಸಿದ್ದಾಗ ನಾವೆಲ್ಲ ಬೆಚ್ಚಿ ಬಿದ್ದಿದ್ದೆವು. ಗೆಳೆಯ ಡಾ. ಅವನೀಂದ್ರನಾಥ ರಾವ್ ಮತ್ತು ರೇಣುಕಾ ನಿಡಗುಂದಿ ಅವರು ಶ್ರಮವಹಿಸಿ ಆ ವಿಚಾರ ಸಂಕಿರಣದ ಭಾಷಣಗಳನ್ನು ಮುಂದೆ ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ಪ್ರಕಟವಾಗುವಂತೆ ನೋಡಿಕೊಂಡರು. ಕನ್ನಡ ಸಾಹಿತ್ಯದ ಮೇಲೆ ಸರೋಜಿನಿ ಮಹಿಷಿ ಅವರಿಗಿದ್ದ ಒಲವು ಮತ್ತು ಹಿಡಿತ ಅವರನ್ನು ನಾನು ಮತ್ತು ನನ್ನಂಥ ಹಲವರು ಗಾಢವಾಗಿ ಗೌರವಿಸುವಂತೆ ಮಾಡಿತ್ತು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿದ್ದ ಡಾ. ಬಿ.ಎ. ವಿವೇಕ ರೈ ಅವರಿಗೆ ಡಾ. ಸರೋಜಿನಿ ಮಹಿಷಿ ಅವರ ವಿದ್ವತ್ತಿನ ಬಗ್ಗೆ ತಿಳಿದಿತ್ತು. ಮಹಿಷಿ ಅವರು ಕನ್ನಡಿಗರಿಗೆ ದೊರಕಬೇಕಾಗಿದ್ದ ಉದ್ಯೋಗದ ಹಕ್ಕಿನ ಬಗ್ಗೆ ಮಾಡಿದ ವರದಿಯ ಔಚಿತ್ಯದ ಕುರಿತೂ ಅವರು ತಿಳಿದಿದ್ದರು. ಕಾರಣ ಕನ್ನಡ ವಿಶ್ವವಿದ್ಯಾಲಯ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು ಮಹಿಷಿಯವರಿಗೆ ನೀಡಲು ಯೋಚಿಸಿ ಆ ಕುರಿತು ನನ್ನನ್ನು ಸಂಪರ್ಕಿಸಿದ್ದರು. ನಾನು ಮಹಿಷಿ ಅವರ ಬಗ್ಗೆ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಳಿಸಿಕೊಟ್ಟಿದ್ದೆ. ವಿಶ್ವವಿದ್ಯಾಲಯ ಮಹಿಷಿಯವರಿಗೆ ನಾಡೋಜ ಪ್ರಶಸ್ತಿ ನೀಡಲು ನಿರ್ಧರಿಸಿದಾಗ ನಾನು ಮಹಿಷಿಯವರನ್ನು ಸಂಪರ್ಕಿಸಿದಾಗ 'ಇದು ಮುದಿ ಮರ, ನಾಡೋಜದ ಸಿಂಗಾರವೇಕೆ? ಅಂತ ಛೇಡಿಸಿದ್ದರು.

ಕಾರಣಾಂತರಗಳಿಂದ ದೆಹಲಿ ಕರ್ನಾಟಕ ಸಂಘದಿಂದ ಎರಡು ದಶಕಗಳಿಗೂ ಮೀರಿ ದೂರ ಉಳಿದಿದ್ದ ಅವರನ್ನು ನಾನು, ಉಷಾ ಭರತಾದ್ರಿ, ಸಂಜೀವ ದೇಶಪಾಂಡೆ ಮತ್ತು ಬಿ.ಕೆ. ಬಸವರಾಜು ಅವರು ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆಗೆ ಹೂಗುಚ್ಛ ಹಿಡಿದು ಕರೆಯಲು ಹೋದಾಗ ಅವರಿಂದ ಬೈಸಿಕೊಂಡದ್ದು ನಮಗೆ ಮಾತ್ರ ಗೊತ್ತು. ಅವರ ಕನ್ನಡ ಪ್ರೇಮ ಆ ಸಮಯದಲ್ಲಿ ಕಣ್ಣೀರಾಗಿ ಹರಿದಿತ್ತು ಕೂಡಾ. ಮುಂದೆ ಅವರು ಸಂಘಕ್ಕೆ ಬಂದರು, ಕರೆದಾಗಲೆಲ್ಲ ಬಂದರು. ಕರ್ನಾಟಕ ಸಂಘ, ಕನ್ನಡ ಶಾಲೆಗಳಲ್ಲಿ ನಡೆಯುತ್ತಿದ್ದ ಚುನಾವಣೆಗಳಲ್ಲಿ ಅವರು ತಪ್ಪದೆ ಮತದಾನ ಮಾಡುತ್ತಿದ್ದರು.

ಡಾ. ಮಹಿಷಿ ಅವರು ನಾಡು ನುಡಿಗೆ ತಾವು ಸಲ್ಲಿಸಿದ ಸೇವೆ ಅಸಾಧಾರಣವಾದುದು. ಅವರು ಕೇಂದ್ರ ಸರಕಾರದಲ್ಲಿ ಸಚಿವರಾಗಿದ್ದರು. ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಹಿಂದಿ ಸಾಹಿತ್ಯ ಸಭಾದಲ್ಲಿ ಪ್ರಭಾವೀ ಕಾರ್ಯಕರ್ತರಾಗಿದ್ದರು. ಇಷ್ಟೆಲ್ಲಾ ಆದರೂ ಅವರು ಕೊನೆವರೆಗೆ ಸರಳವಾಗಿಯೇ ಉಳಿದರು. ಕರೆದಾಗಲೆಲ್ಲ ರಿಕ್ಷಾದಲ್ಲಿ ಬಂದು ಹೋಗುತ್ತಿದ್ದರು. ಅವರ ಸರಳತೆ ನಮಗೊಂದು ಮಾದರಿ.

ಧಾರವಾಡದಲ್ಲಿ ಹುಟ್ಟಿ ಬೆಳೆದ ಅವರ ಭಾಷೆ ಕೊನೆವರೆಗೆ ಉತ್ತರ ಕರ್ನಾಟಕದ ಸೊಗಸನ್ನು ಬಿಟ್ಟುಕೊಟ್ಟಿರಲಿಲ್ಲ. ಹಲವು ದಶಕಗಳ ಕಾಲ ಅವರು ದೆಹಲಿ ವಾಸಿಯಾಗಿದ್ದರೂ, ಕನ್ನಡ ಮಾತಾಡುವಾಗ ಅವರು ಹಿಂದಿ ಇಂಗ್ಲಿಷ್ ಅದರೊಂದಿಗೆ ಸೇರಿಸುತ್ತಿರಲಿಲ್ಲ. ಮಹಿಳೆಯರ ಏಳಿಗೆಯ ಬಗ್ಗೆ ಅವರು ಕೊನೆತನಕ ಅತ್ಯಂತ ಪ್ರಗತಿಪರವಾಗಿ ಮಾತಾಡುತ್ತಿದ್ದರಲ್ಲದೆ ಅದಕ್ಕಾಗಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದ್ದರು.

ಸಮಾಜ ಸೇವೆಯ ಜೊತೆಗೆ ಅವರು ನಿರಂತರವಾಗಿ ಸಾಹಿತ್ಯದ ಕೆಲಸ ಮಾಡುತ್ತಾ ಬಂದರು. ನವಿಲು, ಇಂಚರ ಎನ್ನುವ ಮಕ್ಕಳ ಸಾಹಿತ್ಯಕ್ಕಾಗಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ಮುಳ್ಳು ಗುಲಾಬಿ ಕವನ ಸಂಕಲನಕ್ಕಾಗಿ ಕರ್ನಾಟಕ ರಾಜ್ಯ ಸರಕಾರದ ಪ್ರಶಸ್ತಿ ದೊರೆಯಿತು. ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕಾವ್ಯವನ್ನು ಹಿಂದಿಗೆ ಅನುವಾದಿಸಿದ್ದು ಅವರ ದೊಡ್ಡ ಸಾಧನೆಗಳಲ್ಲೊಂದು. ಜೊತೆಗೆ ಶಾಕುಂತಲವನ್ನು ಮರಾಠಿಯಿಂದ ಕನ್ನಡಕ್ಕೂ ಡಿ.ವಿ.ಗುಂಡಪ್ಪನವರ ಮಂಕು ತಿಮ್ಮನ ಕಗ್ಗವನ್ನು ಕನ್ನಡದಿಂದ ಹಿಂದಿಗೂ ಅನುವಾದಿಸಿ ಭಾಷೆಗಳ ನಡುವೆ ಬಂಧ ಬೆಸೆದರು.

ಕರ್ನಾಟಕದಲ್ಲಿ ಕನ್ನಡಿಗರಿಗೆ ದೊರೆಯುತ್ತಿದ್ದ ಉದ್ಯೋಗಾವಕಾಶಗಳನ್ನು ಪರಿಶೀಲಿಸಿ ವಿಮರ್ಶಿಸಲು ಕರ್ನಾಟಕ ಸರಕಾರವು ಅವರನ್ನು ಕೇಳಿಕೊಂಡಾಗ ಅವರು ಶ್ರಮವಹಿಸಿ ಸಿದ್ಧ ಪಡಿಸಿದ ವರದಿಯು ನಮ್ಮ ಹೋರಾಟಗಳಿಗೆ ಬರೆದ ಒಂದು ಮುನ್ನುಡಿ.

ಅವರ ಸಾಧನೆಗಳನ್ನು ಪರಿಚಯಿಸುವ ಪುಸ್ತಕವೊಂದು ದೆಹಲಿಯಿಂದ ಪ್ರಕಟವಾಗದೆ ಇನ್ನೆಲ್ಲಿಂದ ಪ್ರಕಟವಾಗಬೇಕು? ಅ




*ಡಾ. ಪುರುಷೋತ್ತಮ ಬಿಳಿಮಲೆ*

# ರಾಷ್ಟ್ರ ರಾಜಧಾನಿಯಲ್ಲಿ ಮಕರ ಸಂಕ್ರಾಂತಿ ಮಿಲನ




ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀ ವೆಂಕಯ್ಯ ನಾಯ್ಡು ಅವರ ನವದೆಹಲಿಯ ಮನೆಯಲ್ಲಿ ಮಿಲನ ಕಾರ್ಯಕ್ರಮವನ್ನು ಏರ್ಪಡಿಸಿದ್ದು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕೇರಳದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಆಯೋಜಿಸಲಾಗಿತ್ತು, ಇದರಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕದ ವಿದ್ವಾನ್ ಕೋಲಾರ್ ರಮೇಶ್ ಅವರ ತಂಡದಿಂದ ಸುಗ್ಗಿ ಕುಣಿತ, ಸಮೂಹ ನೃತ್ಯ ಹಾಗೂ ಯಕ್ಷಗಾನವನ್ನು ಪ್ರದರ್ಶಿಸಲಾಯಿತು.


ಈ ಕಾಯ್ರಕ್ರಮಗಳನ್ನು ವೀಕ್ಷಿಸಿದ ಮುಖ್ಯ ಅತಿಥಿಯಾಗಿದ್ದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ ರಾಜ್ಯದ ಉಪರಾಜ್ಯಪಾಲರು, ಕೇಂದ್ರ ಸಚಿವರು, ಲೋಕಸಭೆ ಹಾಗೂ ರಾಜ್ಯ ಸಭೆಯ ಸದಸ್ಯರು ಮತ್ತು ಹಿರಿಯ ರಾಜಕಾರಣಗಳು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

# ವಿಜಯ ಲಲಿತಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಚಿತ್ರಕಲಾ ಪ್ರದರ್ಶನ





ಗದಗಿನ ವಿಜಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆಯಲ್ಲಿ ಪದವಿ ವ್ಯಾಸಂಗ ನಿರತರಾಗಿರುವ ವಿದ್ಯಾರ್ಥಿಗಳು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಜನವರಿ 21ರಿಂದ 23ರ ವರೆಗೆ ಚಿತ್ರಕಲಾ ಪ್ರದರ್ಶನವನ್ನು ಮಾಡಿದರು. ಅವರು ಹೊಸ ದೃಷ್ಟಿ ಎಂಬ ಸೀರ್ಷಿಕೆಯಲ್ಲಿ ದೆಹಲಿ ಅಲ್ಲದೇ ಬೆಂಗಳೂರು ಮತ್ತು ಹೈದರಾಬಾದ್‌ನಲ್ಲೂ ಈ ವಾರ್ಷಿಕ ಪ್ರದರ್ಶನವನ್ನು ಮಾಡಿದರು.

ಸಂಘದ ಆರ್ಟ್ ಗ್ಯಾಲರಿಯಲ್ಲಿ ನಡೆದ ಪ್ರದರ್ಶನದ ಉದ್ಘಾಟನೆಯನ್ನು ಹಿರಿಯ ಶಿಲ್ಪ ಕಲಾವಿದ ಮತ್ತು ಆಲ್ ಇಂಡಿಯಾ ಫೈನ್ ಆರ್ಟ್ ಮತ್ತು ಕ್ರಾಫ್ಟ್ ಸೊಸೈಟಿಯ ಅಧ್ಯಕ್ಷರಾದ ಪದ್ಮಶ್ರೀ ರಾಮ ವಿ. ಸುತಾರ ಅವರು ಮಾಡಿದರು. ಹಿರಿಯ ಚಿತ್ರಕಲಾವಿದ ಭೀಮರಾವ್ ಮುರಗೋಡ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಉಪಸ್ಥಿತರಿದ್ದರು.

ಈ ಕಲಾ ಪ್ರದರ್ಶನದಲ್ಲಿ 26 ವಿದ್ಯಾರ್ಥಿಗಳ ಜತೆಗೆ ಹಿರಿಯ ಕಲಾವಿದರಾದ ಪ್ರೊ. ಎ.ಟಿ. ಅಕ್ಕಿ, ಪ್ರೊ. ಸಿ.ವಿ. ಬಡಿಗೇರ, ಪ್ರೊ. ವಿ.ಎಫ್. ಕುಂದ್ರಳ್ಳಿ ಹಾಗೂ ಪ್ರೊ. ಎಸ್.ಎ. ಅಕ್ಕಿಯವರ 56 ಕಲಾಕೃತಿಗಳು ಪ್ರದರ್ಶನಗೊಂಡಿವೆ. ಸೃಜನಾತ್ಮಕ ಸಂಯೋಜನಾತ್ಮಕ ಚಿತ್ರಗಳು, ರೇಖಾಚಿತ್ರಗಳು, ಅಮೂರ್ತ ಕಲಾಕೃತಿಗಳು ಸ್ಥಿರಚಿತ್ರಣ ಹಾಗೂ ನವ್ಯ ನವೋದಯ ಕಲಾಕೃತಿಗಳು ಪ್ರದರ್ಶನಗೊಂಡವು. ಅ

***ಅಭಿಮತ ವರದಿ***

# ಡೆಲ್ಲಿ ಫ್ರೆಂಡ್ಸ್ ತಂಡದಿಂದ ಮುದ್ದಣ್ಣನ ಪ್ರಮೋಷನ್ ಪ್ರಸಂಗ

ಡೆಲ್ಲಿ ಫ್ರೆಂಡ್ಸ್ ತಂಡವು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 10ರಂದು ಮುದ್ದಣ್ಣನ ಪ್ರಮೋಷನ್ ಪ್ರಸಂಗದ ಪ್ರಯೋಗವನ್ನು ಏರ್ಪಡಿಸಿತ್ತು.

ಹೆಸರಿಗೆ ತಕ್ಕ ಹಾಗೆ ಮುದ್ದಣ್ಣನ ಪ್ರಮೋಷನ್ ಪ್ರಸಂಗ ನಿಜವಾಗಿಯೂ ದಿನನಿತ್ಯದ ದಿನಗೂಲಿ ಕಾರ್ಮಿಕನಿಂದ ಹಿಡಿದು ರಾಷ್ಟ್ರಮಟ್ಟದ ಅತ್ಯುನ್ನತ ಹುದ್ದೆಯಲ್ಲಿರುವ ಸ್ತ್ರೀ ಪುರುಷನ ಕಾರ್ಯವೈಖರಿಯಲ್ಲಿ ಆಗುವ ಏರುಪೇರುಗಳ ಹಾಗೂ ಅವರ ನಿಜವಾದ ಜೀವನ ಚಿತ್ರಣವನ್ನು ಬಿಂಬಿಸುವಂತಹದ್ದಾಗಿದೆ. ಇಲ್ಲಿ ಮುದ್ದಣ್ಣನನ್ನು ನಿರ್ದೇಶಕನು ಎಷ್ಟು ಚೆನ್ನಾಗಿ ಕಥೆಯ ನಾಯಕ ಅವನೇ ಅಲ್ಲವೋ ಎನ್ನುತ್ತಾ ವೀಕ್ಷಕ ಕೊನೆಗೊಮ್ಮೆ ಮುದ್ದಣ್ಣನೇ ನಾಯಕ ಎಂದೊಪ್ಪಿಕೊಳ್ಳುವಂತೆ ಕಥೆಯನ್ನು ಹೆಣೆದು ಪಾತ್ರ ಜೋಡಣೆ ಮಾಡಿದ್ದಾಗಿದೆ. ಇದಲ್ಲದೆ ಮುಗ್ಧ ಮುದ್ದಣ್ಣನ ಹೆಂಡತಿಯನ್ನು ಮರುಳುಗೊಳಿಸಿ ತವರಿಗೆ ಕಳುಹಿಸುವ ದೃಶ್ಯವಂತೂ ಅತಿ ಸುಂದರವಾಗಿ ಎತ್ತಿ ತೋರಿಸಿರುವುದು ವಿಶೇಷವಾಗಿದೆ.

ಕೆಲವೊಂದೆಡೆ ಉಂಡು ಹೋದ, ಕೊಂಡು ಹೋದ ಎನ್ನುವಂತೆ ಬಂದು ಹೋಗುವ ಬಾವ–ಮೈದುನನ ಪಾತ್ರವಂತೂ ಉಂಡಾಡಿ ಗುಂಡರಿಗೆ ಹೋಲಿಕೆಯಾದರೆ ಸಂಶಯವೇ ಇಲ್ಲ. ಜೊತೆಗೆ ಪ್ರೇಕ್ಷಕರನ್ನು ಕಟ್ಟಿ ಹಾಕುವ ಹಾಗು ಪ್ರತಿಯೊಬ್ಬ ಪ್ರೇಕ್ಷಕನ ನಿಜ ಜೀವನದ ಘಟನೆಗಳನ್ನು ಮೆಲುಕು ಹಾಕುವಂತೆ ಮಾಡುವ ಮುನಿಸ್ವಾಮಿಯಂತಹ ಬೇಜವಾಬ್ದಾರಿ, ಆಸೆಬುರುಕ, ಹಾಗೂ ತಪ್ಪುದಾರಿ ಹಿಡಿಯುವಂತೆ ಮಾಡುವ ಸಿದ್ದುರಂತವರು ಕೆಳವರ್ಗದ ಕೆಲಸದಾಳು, ಕ್ಲಾರ್ಕ್‌ಗಳಿಂದ ನಿಷ್ಠಾವಂತ ಜವಾಬ್ದಾರಿಯುತ ಸುಗುಣವಂತ ಸಹೋದ್ಯೋಗಿ ಮುದ್ದಣ್ಣನಂತವರಿಗೆ ಆಗುವ ನಷ್ಟಗಳನ್ನು ಮುಗ್ಧ ಪ್ರೇಕ್ಷಕನ ಮೇಲಿಂದ ತನ್ನ ಜೀವನದ್ದೇ ಆಧಾರಿತ ಈ ಕಥೆಯೆನ್ನುವಂತೆ ಮಾಡಿದ ನಿರ್ದೇಶಕನ ನಿರ್ಣಾಯಕ ಪಾತ್ರಗಳ ಜೋಡಣೆಯಂತೂ ತುಂಬಾ ಮುದ್ದಾಗಿದೆ.

ನಾಟಕದಲ್ಲಿ ನಾಟಕ ಎನ್ನುವಂತೆ ಪ್ರೇಕ್ಷಕರನ್ನು ಮತ್ತೊಂದೆಡೆ ಎಳೆದು ಕೊಂಡೊಯ್ಯುವ ರಂಗ ಕಲಾವಿದರಾದ ರಮಾಮಣಿ ಹಾಗೂ ಮುನಿರಾಜು ಅವರ ಕುಲುಕ್ಷೇತ್ರದ ಪ್ರಸಂಗಗಳು ಇನ್ನೂ ಚೆನ್ನಾಗಿ ಮೂಡಿಬಂದಿದ್ದು ರಂಗದ ಮೇಲೆ ಅಭಿನಯಿಸುತ್ತಿರುವವರು ಸ್ಥಳೀಯ ಹವ್ಯಾಸಿ ಕಲಾವಿದರೆಂದು ನಂಬಲು ಅಸಾಧ್ಯವಾಗಿತ್ತು.

ಜೊತೆಗೆ ರೂಪ ಹಾಗೂ ಪಾತ್ರಕ್ಕೆ ತಕ್ಕ ವೇಷಭೂಷಣ, ಪ್ರಸಾಧನ ಮತ್ತು ಸಮಯಕ್ಕೆ ತಕ್ಕಂತೆ ದೃಶ್ಯ, ಸನ್ನಿವೇಶಕ್ಕೆ ತಕ್ಕಂತಹ ಹಿಂಬದಿಯ ಪರದೆಗಳು ಬೆಳಕು, ಒಂದೆಡೆ ಮೆಚ್ಚುಗೆಯಾದರೆ ನಾಟಕಕ್ಕೆ ಧ್ವನಿಯೇ ಬೆನ್ನೆಲುಬೆಂಬುದನ್ನು ನಿಜವಾಗಿಯೂ ಸಾಕಾರಗೊಳಿಸಿ ತೋರಿಸಿದಂತಹ ದೆಹಲಿಯಲ್ಲಿ ಇಂತಹ ಸ್ಥಳೀಯ ಹವ್ಯಾಸಿ ಕಲಾವಿದರಿಗೆ ದೆಹಲಿ ಕರ್ನಾಟಕ ಸಂಘದಂತಹ ಬೃಹತ್ ಸಂಸ್ಥೆಗಳು ಇನ್ನೂ ಹೆಚ್ಚು ಅವಕಾಶಗಳನ್ನು ನೀಡಿ ಸ್ಥಳೀಯ ಕಲಾವಿದರು ಉತ್ತಮ ಕಲಾವಿದರಾಗಿ ಹೊರಹೊಮ್ಮುವಂತೆ ಮಾಡಲಿ. ಅ

*ಈಶ್ವರಲಿಂಗ ಅರೇರ (ಭವಾನಿಸುತ)*








## ನಗೆಯಲ್ಲಿ ಮುಳುಗಿಸಿದ ಮುದ್ದಣ್ಣನ ಪ್ರಮೋಷನ್ ಪ್ರಸಂಗ

ರಾಜೇಂದ್ರ ಕಾರಂತ ವಿರಚಿತ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ಒಂದು ಸೃಜನಶೀಲ ಹಾಸ್ಯಭರಿತ ನಾಟಕ. ಮುಗ್ದ ಮುದ್ದಣ್ಣ ತನ್ನ ಹೆಂಡತಿಯ ಕೊಂಕು ಮಾತುಗಳಿಂದ ಬೇಸತ್ತು ತನಗಿಂತ ಕೆಳಗಿರುವವರು ಆಫೀಸ್‌ನಲ್ಲಿ ಪ್ರಮೋಷನ್ ಪಡೆಯುವುದನ್ನು ಸಹಿಸಲಾಗದೆ ಶತಾಯಗತಾಯ ತನ್ನ ಸ್ನೇಹಿತ ಸಿದ್ದುವಿನ ಸಹಾಯದಿಂದ ತಾನೂ ಮೇಲೇರಿ ಹೆಂಡತಿಯ ಎದುರು ಶಾಬಾಸ್ ಪಡೆಯಬೇಕೆಂದು ವಾಮ ಮಾರ್ಗವನ್ನು ಹಿಡಿದು ಯಶಸ್ವಿಯಾಗದೆ ಕೊನೆಗೆ ಕೆಲಸವನ್ನು ಕಳೆದುಕೊಳ್ಳುವ ಸಂದರ್ಭವನ್ನು ಸೃಷ್ಟಿಮಾಡಿಕೊಳ್ಳುವ ಪ್ರಸಂಗ.

ಇದೇ ಜನವರಿ 10ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಡೆಲ್ಲಿ ಫ್ರೆಂಡ್ಸ್ ತಂಡದ ವತಿಯಿಂದ ಪ್ರಸ್ತುತಪಡಿಸಲಾಯಿತು.

ಮುದ್ದಣ್ಣ (ಶ್ಯಾಮಸುಂದರ್) ತನ್ನ ಹೆಂಡತಿ (ಸುಜಾತ ಸುಪ್ರಸನ್ನ)ಯ ಕೊಂಕು ನುಡಿಯನ್ನು ತಾಳಲಾರದೆ ಆಫೀಸ್‌ನ ಪಿಯೋನ್‌ನ ಪ್ರಮೋಷನ್ ಸಹಿಸಲಾರದೆ ತಾನೂ ಭಡ್ತಿಯನ್ನು ಪಡೆಯಲೇಬೇಕೆಂದು ಸ್ನೇಹಿತ ಸಿದ್ದು (ಟಿ.ಎಂ. ಮೈಲಾರಪ್ಪ)ವಿನ ಸಲಹೆಯಂತೆ ನಾಟಕದಲ್ಲಿ ಪಾತ್ರ ಮಾಡುವ ಹೆಂಗಸಿನ (ಆಶಾ ಶ್ಯಾಮಸುಂದರ್) ಸಹಾಯದಿಂದ ತನ್ನ ಬಾಸ್ (ದಿಲೀಪ್ ಬಾಪಟ್) ರನ್ನು ಸಂತೋಷಗೊಳಿಸುವ ಹುನ್ನಾರ ಮತ್ತು ವಿಫಲ ಪ್ರಯತ್ನ ಪ್ರೇಕ್ಷಕರನ್ನು ಸುಮಾರು ಒಂದೂವರೆ ಗಂಟೆಗಳ ಕಾಲ ನವಿರುಹಾಸ್ಯದಿಂದ ನಗೆಗಡಲಲ್ಲಿ ಮುಳುಗಿಸಿ ಬಿಗಿಹಿಡಿದಿಟ್ಟಿತು. ಅತ್ಯುತ್ತಮ ಪಾತ್ರ ನಿರ್ವಹಣೆ ಮತ್ತು ಅಮೋಘ ನಿರ್ದೇಶನ ಪ್ರಶಂಸನೀಯ.

ದೆಹಲಿಯ ಚುಮುಚುಮು ಚಳಿಯಲ್ಲಿಯೂ ಸಭಾಂಗಣ ತುಂಬಿ ಮತ್ತು ನಗೆಯಲ್ಲಿ ಮುಳುಗಿಸಿದ್ದಕ್ಕೆ ನಿರ್ದೇಶಕ (ಟಿ.ಎಂ. ಮೈಲಾರಪ್ಪ) ಮತ್ತು ತಂಡಕ್ಕೆ ಅಭಿನಂದನೆಗಳು. ಅ

*ಸ್ನೇಹಾ ರಮಾಕಾಂತ್*

# ಗಣರಾಜ್ಯೋತ್ಸವ ಪೆರೆಡ್ ಮುಂಚೂಣಿಯಲ್ಲಿ ಕರ್ನಾಟಕದ ಸ್ತಬ್ಧ ಚಿತ್ರ

ಭಾರತದ ಗಣರಾಜ್ಯೋತ್ಸವದ ಸಂದರ್ಭದಲ್ಲಿ ನವದೆಹಲಿಯ ರಾಜ್‌ಪಥದಲ್ಲಿ ಜರುಗಿದ ಪಥಸಂಚಲನದಲ್ಲಿ ಪ್ರದರ್ಶನಗೊಂಡ ಸ್ತಬ್ಧಚಿತ್ರಗಳ ಮುಂಚೂಣಿಯಲ್ಲಿ ಕರ್ನಾಟಕದ ಚೆನ್ನಪಟ್ಟಣದ ಗೊಂಬೆಗಳ ಸ್ತಬ್ಧಚಿತ್ರವು ಪಾಲ್ಗೊಂಡಿತು.

ಕರ್ನಾಟಕದ ಸ್ತಬ್ಧಚಿತ್ರಕ್ಕೆ ದೊರೆತ ತೃತೀಯ ಪ್ರಶಸ್ತಿ ಹಾಗು ಪ್ರಮಾಣ ಪತ್ರವನ್ನು ಕೇಂದ್ರ ರಕ್ಷಣಾ ಸಚಿವರಾದ ಶ್ರೀ ಮನೋಹರ್ ಪಾರಿಕರ್ ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್. ಆರ್. ವಿಶುಕುಮಾರ್ ಅವರಿಗೆ ಪ್ರದಾನ ಮಾಡಿದ್ದರು.

ಖ್ಯಾತ ಕಲಾವಿದ ಶಶಿಧರ ಅಡಪ ಅವರ ನೇತೃತ್ವದಲ್ಲಿ ಸುಮಾರು 100 ಮಂದಿ ಮೌಲ್ಡರ್‌ಗಳು, ಮರಗೆಲಸದವರು ಹಾಗು ಕಲಾವಿದರು ಬೆಂಗಳೂರು ಹಾಗು ನವದೆಹಲಿಯಲ್ಲಿ ಈ ಸ್ತಬ್ಧಚಿತ್ರವನ್ನು ಸಿದ್ಧಗೊಳಿಸಿದರು.

ಈ ಸ್ತಬ್ಧಚಿತ್ರದಲ್ಲಿ 4 ಅಡಿ ಗಳಿಂದ 10 ಅಡಿಗಳ ವರೆಗೆ ಒಟ್ಟು 42 ಬೊಂಬೆ ಹಾಗು ಆಟಿಕೆಗಳು ಪ್ರದರ್ಶನಗೊಂಡಿದ್ದು ನಾಲ್ಕು ಬೊಂಬೆಗಳು ಬ್ಯಾಟರಿ ಚಾಲಿತವಾಗಿ ತಿರುಗುವ ಪ್ರಕ್ರಿಯೆಯನ್ನು ಹೊಂದಿದ್ದವು. ಎಲ್ಲಾ ಗೊಂಬೆಗಳಿಗೆ ನೈಸರ್ಗಿಕ ಬಣ್ಣವನ್ನು ಬಳಸಲಾಗಿತ್ತು.




ಕನ್ನಡದ ಜನಪ್ರಿಯ ಶಿಶುಗೀತೆಯಾದ ಆನೆ ಬಂತೊಂದಾನೆ ಗೀತೆಯ ಕೆಲವು ಸಾಲುಗಳನ್ನು ಹೆಸರಾಂತ ಸಂಗೀತ ನಿರ್ದೇಶಕ ಪ್ರವೀಣ್ ರಾವ್ ಅವರು ಸಂಗೀತದೊಡನೆ ಸಿದ್ಧಗೊಳಿಸಿದ್ದರು.

ದೆಹಲಿಯ ಕನ್ನಡ ಶಾಲೆಯ ವಿದ್ಯಾರ್ಥಿಗಳಾದ ಸಹನಾ, ಭಾವನಾ, ವರ್ಷ, ಭೂಮಿಕ, ರಾಘವೇಂದ್ರ, ಮಹೋಹರ, ಪುನೀತ್ ಹಾಗು ಜನಕ ಪುರಿಯ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿ ಬಸವೇಗೌಡ ಆಕರ್ಷಕ ಬಣ್ಣಬಣ್ಣದ ಆಟಿಕೆಗಳೊಂದಿಗೆ ಸ್ತಬ್ಧಚಿತ್ರದೊಂದಿಗೆ ಪಾಲ್ಗೊಂಡಿದ್ದರು.

ಚೆನ್ನಪಟ್ಟಣದಲ್ಲಿ ಮರ ಹಾಗು ಅರಗು ಉಪಯೋಗಿಸಿ ಬಣ್ಣಬಣ್ಣದ ಆಟಿಕೆ ಮತ್ತು ಬೊಂಬೆಗಳನ್ನು ತಯಾರಿಸುವ ಕಸುಬಿಗೆ ಎರಡೂವರೆ ಶತಮಾನಗಳ ಇತಿಹಾಸವಿದೆ. ಮೈಸೂರು ಸಂಸ್ಥಾನದ ದೊರೆ ಟಿಪ್ಪು ಸುಲ್ತಾನ್ ಪರ್ಶಿಯಾದ ಕೆಲವು ಕಲಾವಿದರ ಕುಟುಂಬಗಳನ್ನು ಚೆನ್ನಪಟ್ಟಣದಲ್ಲಿ ನೆಲೆಸುವಂತೆ ಮಾಡಿ ಬೊಂಬೆ ಹಾಗು ಆಟಿಕೆಗಳ ತಯಾರಿಕೆಗೆ ನಾಂದಿ ಹಾಡಿದನೆಂದು ಇತಿಹಾಸವಿದೆ. ಚೆನ್ನಪಟ್ಟಣದಲ್ಲಿ ಪ್ರಸ್ತುತ ಸುಮಾರು 500 ಕುಟುಂಬಗಳು ಈ ಬಣ್ಣ ಬಣ್ಣದ ಬೊಂಬೆಗಳ ತಯಾರಿಕೆಗೆ ನಿರತರಾಗಿದ್ದು, ದೇಶ ವಿದೇಶಗಳಲ್ಲಿಯೂ ಚೆನ್ನಪಟ್ಟಣದ ಬೊಂಬೆಗಳಿಗೆ ಬೇಡಿಕೆ ಇದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್. ಆರ್. ವಿಶುಕುಮಾರ್ ಅವರ ನೇತೃತ್ವದಲ್ಲಿ ಚೆನ್ನಪಟ್ಟಣದ ಗೊಂಬೆಗಳ ಸ್ತಬ್ಧಚಿತ್ರವು ಪಥಸಂಚಲನದಲ್ಲಿ ಪ್ರದರ್ಶನಗೊಳ್ಳಲು ಆಯ್ಕೆಯಾಗಿತ್ತು. ಸ್ತಬ್ಧಚಿತ್ರದ ಕಲಾವಿದರು ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಹಾಗು ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿ ಅವರನ್ನು ಭೇಟಿ ಮಾಡಿದರು. ಅ

*ಅಭಿಮತ ವರದಿ*

## ಅನಿಸಿಕೆ

## ಗಣರಾಜ್ಯೋತ್ಸವದ "ಸ್ತಬ್ಧಚಿತ್ರದಲ್ಲಿ ಪಾಲ್ಗೊಂಡ ದೆಹಲಿ ಕನ್ನಡ ಶಾಲೆಯ ಮಕ್ಕಳು

ಜಗತ್ತಿನಾದ್ಯಂತ ಪ್ರಸಿದ್ಧವಾಗಿರುವ ಕರ್ನಾಟಕದ ಚನ್ನಪಟ್ಟಣದ ಗೊಂಬೆಗಳನ್ನು ವಸ್ತು ವಿಷಯವನ್ನಾಗಿ ಮಾಡಿಕೊಂಡು ರಾಜ್ಯದ ಸ್ತಬ್ಧಚಿತ್ರವನ್ನು ದೆಹಲಿಯಲ್ಲಿ ನಡೆದ 66ನೇ ವರ್ಷದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಮೊದಲನೆಯದಾಗಿ ಸಾಗಿ ಬಂದುದು ಗೌರವಕ್ಕೆ ಪಾತ್ರವಾಗಿತ್ತು.

ಒಟ್ಟು 42 ಬೊಂಬೆ ಮತ್ತು ಆಟಿಕೆಗಳನ್ನು ಅಳವಡಿಸಿದ್ದು ಕಲಾವಿದ ಶಶಿಧರ ಅಡಪ ಅವರ ಪರಿಕಲ್ಪನೆಯಂತೆ ಸ್ತಬ್ಧಚಿತ್ರಗಳನ್ನು ರೂಪಿಸಿ ಅದನ್ನು ಸಾಕಾರಗೊಳಿಸಲು ಸತತ ಎರಡು ತಿಂಗಳು 100 ಕಾರ್ಮಿಕರು, ಕಲಾವಿದರು ಶ್ರಮಿಸಿದ್ದರು. ಜನಪ್ರಿಯ ಮಕ್ಕಳ ಪದ್ಯ "ಆನೆ ಬಂತೊಂದಾನೆ. . . ಇದ್ಯಾವೂರಾನೆಯ" ಸಂಗೀತ ಅಳವಡಿಸಲಾಗಿತ್ತು. ಎಡ ಮತ್ತು ಬಲ ಬದಿಯಲ್ಲಿ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಮಕ್ಕಳಾದ ಭೂಮಿಕ ಶಿವರಾಂ, ಸಹನಾ ಮೈಲಾರಪ್ಪ, ಭಾವನಾ ಶ್ರೀಧರ್, ವರ್ಷಾ, ಮನೋಹರ, ಪುನೀತ್ ಚಂದ್ರಪ್ಪ ಹಾಗೂ ಕೇಂದ್ರಿಯ ವಿದ್ಯಾಲಯದ ಬಸವೇಗೌಡ ಗಾಲಿಗಳುಳ್ಳ ಬಣ್ಣಬಣ್ಣದ ಗೊಂಬೆಗಳನ್ನು ಎಳೆದೊಯ್ಯುತ್ತಾ ನೆರೆದಿದ್ದ ಲಕ್ಷಾಂತರ ಪ್ರೇಕ್ಷಕರ ಗಮನ ಸೆಳೆದರು. ಮುಖ್ಯ ವಿಷಯವೆಂದರೆ ಈ ಸಲದ ಗಣರಾಜ್ಯೋತ್ಸವಕ್ಕೆ ಅತಿಥಿಯಾಗಿ ಆಗಮಿಸಿದ್ದ ಅಮೇರಿಕಾದ ಅಧ್ಯಕ್ಷ ಬರಾಕ್ ಓಬಾಮ ಮತ್ತವರ ಪತ್ನಿ ಚಳಿ ಮತ್ತು ತುಂತುರು ಮಳೆಯಲ್ಲೂ ಬಹಳ ಖುಷಿಪಡುತ್ತಾ ವೀಕ್ಷಿಸಿದರು.

ಕಲಾವಿದ ಶಶಿಧರ ಅಡಪ ಅವರು ಗಣರಾಜ್ಯೋತ್ಸವಕ್ಕಾಗಿ ಆರನೇ ಬಾರಿ ಸ್ತಬ್ಧಚಿತ್ರವನ್ನು ನಿರ್ಮಿಸಿದ್ದಾರೆ. ಈಗಾಗಲೇ ಮೂರು ಬಾರಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಮಕ್ಕಳನ್ನೇ ಕೇಂದ್ರೀಕರಿಸಿ ಚನ್ನಪಟ್ಟಣದ ಬೊಂಬೆಗಳ ಸ್ತಬ್ಧಚಿತ್ರವನ್ನು ಸಿದ್ದಪಡಿಸಲಾಗಿದೆ. ಅದರಲ್ಲಿ ಪಾಲ್ಗೊಂಡ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಮಕ್ಕಳಿಗೂ ಸತತ 20 ದಿನಗಳ ತರಬೇತಿ ಕೊಡಲಾಗಿತ್ತು. ದೆಹಲಿಯಲ್ಲಿ ಚಳಿ, ಮಳೆಯನ್ನು ಲೆಕ್ಕಿಸದೆ ಮಕ್ಕಳು ಭಾಗವಹಿಸಿದ್ದು ಶ್ಲಾಘನೀಯವೆಂದು ವಾರ್ತಾ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ. ಮಕ್ಕಳ ಈ ಸಾಹಸಕ್ಕೆ ಹೆಮ್ಮೆಪಡುತ್ತಾ ಅವರು ಇನ್ನು ಹೆಚ್ಚು ಕಾರ್ಯಶೀಲರಾಗಿ ತಮ್ಮ ವಿದ್ಯಾಭ್ಯಾಸದಲ್ಲಿಯೂ ಹೆಸರನ್ನು ಗಳಿಸಲಿ. ಅ

*ಹೆಚ್.ಜಿ. ಶಿವರಾಮ್*



ನನ್ನ ತಂದೆಯವರು ಕೆಸಿಸಿ ಬ್ಯಾಂಕಿನ ಶಿರಹಟ್ಟಿ ಶಾಖೆಯಲ್ಲಿ ಕೆಲಸದಲ್ಲಿದ್ದು ನಾವು ಶಿರಹಟ್ಟಿಯಲ್ಲಿ ನೆಲೆಸಿದ್ದ ಕಾಲ. ನಾನಾಗ ಐದು ವರ್ಷದವನಿರಬಹುದು. ನನಗೆ ಸ್ವಲ್ಪ ಸ್ವಲ್ಪ ನೆನಪು. ನಮ್ಮ ಮನೆಯ ಸಮೀಪದಲ್ಲಿ ಬಾಲಜೋಷಿ ಸ್ಟೇಷನರಿ ಹಾಗೂ ಕಿರಾಣಿ ಅಂಗಡಿಯೊಂದಿತ್ತು. ನಾನೊಂದು ದಿನ ತೆಗೆದ ಹಲ್ಲಿಯ ಚಿತ್ರಕ್ಕೆ ಅಂಗಡಿ ಮಾಲೀಕ ಚಾಕ್ಲೇಟ್ ಒಂದನ್ನು ಕೊಟ್ಟ. ಅಂದಿನಿಂದ ದಿನವೂ ಒಂದು ಚಿತ್ರ ತೆಗೆದು ಚಾಕ್ಲೇಟ್ ಗಿಟ್ಟಿಸುವ ಹುಚ್ಚು ನನ್ನನ್ನು ಅಂಟಿಕೊಂಡಿತು. ಹಾಗೆ ಅಂಟಿಕೊಂಡ ಚಿತ್ರ ಬಿಡಿಸುವ ಹವ್ಯಾಸ ನನ್ನ ಓದಿನುದ್ದಕ್ಕೂ ಕಾಡಿತು. ಕಾಲೇಜು ದಿನಗಳಲ್ಲಿ ಮಲ್ಲಿಗೆ, ಕಸ್ತೂರಿ ಮಾಸಿಕಗಳಿಗೆ ವ್ಯಂಗ್ಯಚಿತ್ರ ಬರೆದು ಕಳಿಸುತ್ತಿದ್ದೆ. ಆಗೊಮ್ಮೆ ಈಗೊಮ್ಮೆ ಪ್ರಕಟಗೊಂಡವು. ಬ್ರಿಟಿಷ್ ವ್ಯಂಗ್ಯ ಚಿತ್ರಕಾರ ಸರ್ ಡೇವಿಡ್ ಲೋ, ಮತ್ತು ಆರ್.ಕೆ. ಲಕ್ಷ್ಮಣರ ಚಿತ್ರಗಳಿಂದ ಪ್ರಭಾವಿತನಾಗಿದ್ದೆ. ಅವರನ್ನು ಭೇಟಿಯಾಗಬೇಕೆಂಬ ಪ್ರಬಲ ಹಂಬಲ ನನ್ನದಾಗಿತ್ತು. ಗ್ರಂಥಾಲಯಕ್ಕೆ ಹೋಗಿ ಇಂಡಿಯನ್ ಎಕ್ಸ್‌ಪ್ರೆಸ್‌ನ ಅಬು ಅಬ್ರಹಾಂ, ಎಕನಾಮಿಕ್ ಟೈಮ್ಸ್‌ನಲ್ಲಿ ಪ್ರಕಟಗೊಳ್ಳುತ್ತಿದ್ದ ಮಾರಿಯೊ ಮಿರಾಂಡಾರ ವ್ಯಂಗ್ಯ ಚಿತ್ರಗಳನ್ನು ವೀಕ್ಷಿಸುತ್ತಿದ್ದೆ. ಶಂಕರ್ಸ್ ವೀಕ್ಲಿಯನ್ನು ತಪ್ಪದೆ ಓದುತ್ತಿದ್ದ ನನಗೆ ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿ ಆಘಾತ ಮೂಡಿಸಿತ್ತು. ಶಂಕರ್ಸ್ ವೀಕ್ಲಿ ಪ್ರಕಟಣೆ ಸ್ಥಗಿತಗೊಂಡಾಗ ನನ್ನ ಧಾರವಾಡದ ಮಿತ್ರ ವ್ಯಂಗ್ಯ ಚಿತ್ರಕಾರ ನರೇಂದ್ರ ಬೆಂಗಳೂರಿಗೆ ಬಂದರು. ಈ ಮಧ್ಯೆ ಕರ್ನಾಟಕ ವ್ಯಂಗ್ಯ ಚಿತ್ರಕಾರರ ಅಸೋಸಿಯೇಶನ್‌ಗೆ ನಾನು ಸದಸ್ಯ ಕೂಡ ಆದೆ.

1979 ರಲ್ಲಿ ಹಂಪನಾ ಅಧ್ಯಕ್ಷರಾಗಿದ್ದ ಅಂದಿನ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಏರ್ಪಡಿಸಿದ್ದ ಕರ್ನಾಟಕ ವ್ಯಂಗ್ಯ ಚಿತ್ರಕಾರರ ಎರಡನೇ ಸಮ್ಮೇಳನದ ಕರೆಯೋಲೆ ನನಗೆ ಬಂದಿತ್ತು. ಆಗಲೇ ನಾನು ಮೊದಲ ಬಾರಿಗೆ ಬೆಂಗಳೂರಿಗೆ ಹೋದದ್ದು.1979ರ ಜುಲೈ ತಿಂಗಳಿನ 14 ಮತ್ತು 15 ನೇ ತಾರೀಕಿನ ಎರಡು ದಿನಗಳು ನನ್ನ ಜೀವನದಲ್ಲಿ ಇಂದಿಗೂ ಅಚ್ಚಳಿಯದೇ ನಿಂತಿವೆ. ಆ ಸಮ್ಮೇಳನದಲ್ಲಿ ದೇಶದ ಖ್ಯಾತಿವೆತ್ತ ವ್ಯಂಗ್ಯ ಚಿತ್ರಕಾರರಾದ ಆರ್.ಕೆ. ಲಕ್ಷ್ಮಣ, ಅಬು ಅಬ್ರಾಹಂ, ಮಾರಿಯೋ ಮಿರಾಂಡಾ, ಎಂ ಆರ್ ಮೂರ್ತಿ, ನಾಡಿಗ್, ನರೇಂದ್ರ, ಗುಜ್ಜಾರಪ್ಪ ಮುಂತಾದವರೆಲ್ಲ ಇದ್ದರು. ನಾನು ಮಾರಿಯೋ ಮಿರಾಂಡ ಹಾಗೂ ಅಬು ಅಬ್ರಾಹಂರ ಚಿತ್ರ ಬಿಡಿಸಿ ಆಟೋಗ್ರಾಫ್ ಪಡೆದುಕೊಂಡೆ. ಇನ್ನೇನು ಆರ್.ಕೆ. ಲಕ್ಷ್ಮಣ ಅವರ ಚಿತ್ರ ಬಿಡಿಸುವ ಹುನ್ನಾರದಲ್ಲಿದ್ದಾಗ ನನ್ನಿಂದ ಪೆನ್ನು ಮತ್ತು ಪೇಪರ್ ತೆಗೆದು ಕೊಂಡ ಆರ್‌ಕೆ ಲಕ್ಷ್ಮಣರು ನೋಡು ನೋಡುತ್ತಿದ್ದಂತೆಯೇ ನನ್ನ ಚಿತ್ರ ಬಿಡಿಸಿ ನನಗೆ ಆಟೋಗ್ರಾಫ್ ನೀಡಿದರು. ಇಂದಿಗೂ ನಾನದನ್ನು ಅವರು ನನಗಿತ್ತ ಶುಭಾಶೀರ್ವಾದ ಎಂದು ನನ್ನ ಬಳಿ ಇಟ್ಟುಕೊಂಡು ನನ್ನ ಹಲವು ಹವ್ಯಾಸಗಳಲ್ಲಿ ವ್ಯಂಗ್ಯ ಚಿತ್ರಕಲೆಯನ್ನೂ ಹವ್ಯಾಸವಾಗಿ ಬೆಳೆಸಿಕೊಂಡು ಬಂದಿದ್ದೇನೆ. ಈ ವರೆಗೆ ನಾನು ರಚಿಸಿದ ಹಲವಾರು ವ್ಯಂಗ್ಯ ಚಿತ್ರಗಳು ಮಲ್ಲಿಗೆ, ಕಸ್ತೂರಿ, ಹಿಂದುಸ್ತಾನ ಟೈಮ್ಸ್‌ನ ಇವಿನಿಂಗ್ ನ್ಯೂಸ್, ಇಲಸ್ಟ್ರೇಟೆಡ್ ವೀಕ್ಲಿ, ಫೆಮಿನಾ, ಸೊವಿಯಟ್ ರಶಿಯಾದಿಂದ ಪ್ರಕಟಗೊಳ್ಳುತ್ತಿದ್ದ "ಮಿಸಾ", "ಗ್ರಾಫಿತಿ", ಇಂಟೆನ್ಸಿವ್ ಅಗ್ರಿಕಲ್ಚರ್, ಅಗ್ರಿಕಲ್ಚರಲ್ ಎಕ್ಸಟೆನ್ಸನ್ ರಿವ್ಯೂ, ಹೋಂ ಸೈನ್ಸ್, ಹಿಂದಿಯ ಸರಿತಾ, ಮಾಟಿ ಮುದಿರ್, ಹೀಗೆ ಇನ್ನೂ ಅನೇಕ ಪತ್ರಿಕೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಪ್ರಕಟಗೊಂಡಿವೆ. ಆದರೆ 1984ರಲ್ಲಿ 'ಮ್ಯಾನೇಜ್‌ಮೆಂಟ್ ಇನ್ ಇಂಡಿಯಾ' ಪತ್ರಿಕೆಯಲ್ಲಿ ಆರ್.ಕೆ. ಲಕ್ಷ್ಮಣರ ವ್ಯಂಗ್ಯ ಚಿತ್ರದ ಪಕ್ಕದ ಪುಟಗಳಲ್ಲಿ ನಾನು ತೆಗೆದ ಚಿತ್ರ ಪ್ರಕಟಗೊಂಡದ್ದು ನನಗೆ ಅಪರಿಮಿತ ಸಂತಸ ನೀಡಿತ್ತು.

ಆರ್.ಕೆ. ಲಕ್ಷ್ಮಣ ಅವರ ವ್ಯಂಗ್ಯ ಚಿತ್ರಗಳು ಸದಭಿರುಚಿ ಹೊಂದಿದವುಗಳು. ಕಟು ಸತ್ಯವನ್ನು ಬಹು ಮೃದುವಾಗಿ ಹೇಳುವ ಕಲೆ ಅವರಿಗೆ ಕರಗತವಾಗಿತ್ತು. ಅವರು ಅಂದು ನನಗೆ ಹೇಳಿದ ಮಾತು ನೆನಪಿದೆ

**ಭಾರತದ ಪತ್ರಿಕೋದ್ಯಮದ ಇತಿಹಾಸದಲ್ಲಿ 2015ರ ಜನವರಿ 26ರ ದಿನ ಬಹಳ ಶೋಕಮಯವಾಗಿತ್ತು. ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲ ತನ್ನ ಹರಿತವಾದ ವ್ಯಂಗ್ಯಚಿತ್ರಗಳಿಂದ ಜಗತ್ತಿನ ಮತ್ತು ದೇಶದ ಆಗುಹೋಗುಗಳ ಮೇಲೆ ತೀಕ್ಷ್ಣವಾದ ಏಟುಗಳನ್ನು ನೀಡುತ್ತಿದ್ದ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್ ಅವರು ನಿಧನರಾದರು. ಸ್ವತಹ ಕಾರ್ಟೂನಿಸ್ಟ್ ಆಗಿರುವ ಚೆನ್ನು ಎಸ್. ಮಠದ ಅವರು ತನ್ನ ನೆನಪಿನಂಗಳದಿಂದ ತೆಗೆದ ಕೆಲವು ಮಧುರ ಕ್ಷಣಗಳ ಜತೆಗೆ ಲಕ್ಷ್ಮಣ್ ಅವರ ವ್ಯಕ್ತಿಚಿತ್ರವನ್ನು ಅಭಿಮತದ ಓದುಗರೊಂದಿಗೆ ಹಂಚಿದ್ದಾರೆ.**

# ಶ್ರೀ ಸಾಮಾನ್ಯನನ್ನು ಬಿಟ್ಟು ಹೋದ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್



"ವ್ಯಕ್ತಿ ಚಿತ್ರಣ ಅಥವಾ ಕ್ಯಾರಿಕೇಚರ್ ವ್ಯಕ್ತಿತ್ವದ ಭಾವನೆಗೆ ಕನ್ನಡಿಯಾಗಬೇಕು, ವ್ಯಕ್ತಿತ್ವಕ್ಕೆ ಧಕ್ಕೆ ತರಬಾರದು". ನಿಜ ಎಷ್ಟು ಅರ್ಥ ಪೂರ್ಣ ವಾದ ಮಾತು. ಅವರು ಯಾವುದೇ ವ್ಯಕ್ತಿಯನ್ನೂ ತಮ್ಮ ಚಿತ್ರಗಳಲ್ಲಿ ಅಸಭ್ಯವಾಗಿ ಎಂದೂ ಚಿತ್ರಿಸಲಿಲ್ಲ.

ನಾನು ಬಾಲ್ಯದಿಂದಲೂ ಮೆಚ್ಚಿಕೊಂಡ ಈ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣರನ್ನು ನಮ್ಮ ದೆಹಲಿ ಕರ್ನಾಟಕ ಸಂಘಕ್ಕೊಮ್ಮೆ ಕರೆ ತರಬೇಕೆಂದು ಹಲವಾರು ಬಾರಿ ಪ್ರಯತ್ನಿಸಿ ವಿಫಲನಾದೆ. 1998ರಲ್ಲಿ ಸಿರಿಫೋರ್ಟಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲು ಆಗಿನ ಸಮಿತಿಯನ್ನು ಒಪ್ಪಿಸಿಯಾಗಿತ್ತು, ಆದರೆ ಕಾರಣಾಂತರಗಳಿಂದ ಅವರನ್ನು ಕರೆತರಲಾಗಲಿಲ್ಲ.

ಹಿಂದೆಲ್ಲ ವ್ಯಂಗ್ಯ ಚಿತ್ರ ಮೆಚ್ಚಿ ಕೊಳ್ಳುವ ಜನ ನಾಯಕರುಗಳಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಇತ್ತೀಚಿಗೆ ನಡೆದ ಪ್ಯಾರಿಸಿನ ಹೆಬ್ಡೋ ಹತ್ಯಾಕಾಂಡ ಎದುರಿಸಿ ನಿಲ್ಲುವ ಶಕ್ತಿಯನ್ನು ವ್ಯಂಗ್ಯಚಿತ್ರಕಾರ ರೂಢಿಸಿಕೊಳ್ಳಬೇಕಾದ ಅವಶ್ಯಕತೆ ಇಂದಿದೆ. ಅದಕ್ಕೆ ಇರಬೇಕು, ಮೃದು ಹೃದಯಿ ಆರ್.ಕೆ. ಲಕ್ಷ್ಮಣ ಈ ಸಮಯದಲ್ಲಿ ನಮ್ಮಿಂದ ದೂರಾದದ್ದು.

ವ್ಯಂಗ್ಯ ಚಿತ್ರಕಲಾ ಜಗತ್ತಿನ ಪಾತ್ರ ಶ್ರೀ ಸಾಮಾನ್ಯನ (ಕಾಮನ್ ಮ್ಯಾನ್) ಜನಕ ಆರ್.ಕೆ. ಲಕ್ಷ್ಮಣ ಜನಿಸಿದ್ದು ಮೈಸೂರಿನ ಶಾಲಾ ಹೆಡ್ ಮಾಸ್ಟರ್ ಕುಟುಂಬದ ಆರನೆಯ ಗಂಡುಮಗುವಾಗಿ 1921ರ ಅಕ್ಟೋಬರ್ 24ರಂದು. ಈ ಕನ್ನಡ ಕಲಾವಿದನ ಕುಂಚದಿಂದ ಜನಿಸಿದ ಎಂದೂ ಮಾತನಾಡದೆ ಇದ್ದು ಪ್ರತಿ ದಿನವೂ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯ ಮೊದಲ ಪುಟದಲ್ಲಿ ಪ್ರಕಟಗೊಂಡು ಸರಿ ಸುಮಾರು ಅರ್ಧ ಶತಮಾನ ಸತತವಾಗಿ ಓದುಗರಿಗೆ ದೇಶದ ಜನರ ದಿನನಿತ್ಯದ ಬದುಕು, ಘಟನೆ, ಆಗು ಹೋಗುಗಳ ಒಳಹೊಕ್ಕು ಎಚ್ಚರಿಸುತ್ತಿದ್ದ ವ್ಯಕ್ತಿ ಈ ಕಾಮನ್ ಮ್ಯಾನ್. ಆರ್.ಕೆ. ಲಕ್ಷ್ಮಣರು ರಚಿಸಿ ಪ್ರಕಟಿಸುತ್ತಿದ್ದ ಯು ಸೆಡ್ ಇಟ್ ಪಾಕೆಟ್ ವ್ಯಂಗ್ಯ ಚಿತ್ರಗಳು ಐತಿಹಾಸಿಕ ದಾಖಲೆಗಳಾಗಿವೆ. ಆರ್.ಕೆ. ಲಕ್ಷ್ಮಣ್ ಅವರು ನಮ್ಮ ಅಸ್ವಸ್ಥ ಸಮಾಜಕ್ಕೆ ಬೆಳಗಿನ ಜಾವ ವೈದ್ಯರೋಪಾದಿಯಲ್ಲಿ ನೀಡುತ್ತಿದ್ದ ಕಹಿ ಔಷಧಿ ಇದಾಗಿರುತ್ತಿತ್ತು.

ಶಾಲೆಗೆ ಹೋಗುವುದಕ್ಕೆ ಮೊದಲಿನಿಂದಲೂ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಇರಿಸಿಕೊಂಡಿದ್ದ ಇವರು ಚಿತ್ರಕಲೆಗೆ ಕುರಿತಾದ ಯಾವುದೇ ಶಿಕ್ಷಣ ಪಡೆಯದೇ ಸ್ವತಃ ಅಭ್ಯಾಸ ಮಾಡಿದರು. ಬಾಲ್ಯದಲ್ಲಿ ಮನೆಯ ಗೋಡೆಯ ಮೇಲೆ, ಶಾಲೆಯಲ್ಲಿ ಪುಸ್ತಕಗಳ ಮೇಲೆ ಚಿತ್ರ ಬಿಡಿಸಿ ಒಂದೊಮ್ಮೆ ಶಿಕ್ಷೆ ಗೊಳಗಾಗಿ ಮತ್ತೊಮ್ಮೆ ಪ್ರಶಂಸೆಗಳಿಸಿ ಚಿತ್ರಕಾರರಾದದ್ದು. ಆರ್.ಕೆ. ಲಕ್ಷ್ಮಣರ ಐದು ಜನ ಅಣ್ಣಂದಿರಲ್ಲಿ ಒಬ್ಬರಾದ ಆರ್.ಕೆ. ನಾರಾಯಣ ಆ ಹೊತ್ತಿಗಾಗಲೇ ದೇಶದ ಉತ್ತಮ ಲೇಖಕರಾಗಿ ಪ್ರಸಿದ್ಧಿ ಪಡೆದಿದ್ದರು.

ಆಶ್ಚರ್ಯದ ಸಂಗತಿಯಂದರೆ, ಈ ಮಹಾನ್ ಚಿತ್ರಕಲಾವಿದನಿಗೆ ಮುಂಬೈನ ಜೆ ಜೆ ಸ್ಕೂಲ್ ಆಫ್ ಆರ್ಟ್ ಪ್ರವೇಶ ನೀಡಲಿಲ್ಲವಂತೆ. ಹಾಗೇನಾದರೂ ಆರ್.ಕೆ. ಲಕ್ಷ್ಮಣರಿಗೆ ದಾಖಲಾತಿ ದೊರೆತಿದ್ದರೆ ಅವರಿಗೆ ನೈಸರ್ಗಿಕವಾಗಿಯೇ ಕರಗತ ವಾಗಿದ್ದ ನೈಜ ಚಿತ್ರಕಲೆ ಅಲ್ಪ ಸ್ವಲ್ಪ ವಿರೂಪ ಗೊಂಡು ಇನ್ನಾವುದೂ ಕಲಾ ಶಿಕ್ಷಕರ ಶೈಲಿಯ ಪ್ರತಿಕೃತಿ ರಚಿಸುವ ಸಾಮಾನ್ಯ ಕಲಾಕಾರನಾಗಿಯೇ ಉಳಿಯುತ್ತಿದ್ದರೆನೋ.

ಮೈಸೂರಿನ ಮಹಾರಾಜ ಕಾಲೇಜಿನಿಂದ ಪದವಿ ಪಡೆದ ನಂತರ ಇವರು ರಚಿಸಿದ ಮೊದಲ ರಾಜಕೀಯ ವ್ಯಂಗ್ಯ ಚಿತ್ರಗಳು ಪ್ರಕಟಗೊಂಡಿದ್ದು "ಸ್ವತಂತ್ರ" ಮತ್ತು "ಕೊರವಂಜಿ" ಪತ್ರಿಕೆಗಳಲ್ಲಿ. ನಂತರ ಕೆಲವು ದಿನ ಮದ್ರಾಸಿನ ಜೆಮಿನಿ ಸ್ಟುಡಿಯೋ ದಲ್ಲಿ ಕೆಲಸ ಮಾಡಿದರಂತೆ. ತದನಂತರ ಮುಂಬೈನ ಫ್ರೀ ಪ್ರೆಸ್ ಜರ್ನಲ್‌ನಲ್ಲಿ ಪೂರ್ಣಾವಧಿ ವ್ಯಂಗ್ಯ ಚಿತ್ರಕಾರಾಗಿ ಕೆಲಸಕ್ಕೆ ಸೇರಿದರು. ಇಲ್ಲಿ ಇವರ ಸಹ ವ್ಯಂಗ್ಯ ಚಿತ್ರಕಾರರಾಗಿದ್ದವರು ಇನ್ನೋರ್ವ ಮಹಾನ್ ವ್ಯಂಗ್ಯ ಚಿತ್ರಕಾರ ಬಾಳ್ ಠಾಕ್ರೆ. ಅಲ್ಲಿಂದ 1947ರಲ್ಲಿ ಮುಂಬೈಯ ಟೈಮ್ಸ್ ಆಫ್ ಇಂಡಿಯಾದಲ್ಲಿ ಪೂರ್ಣಾವಧಿ ವ್ಯಂಗ್ಯ ಚಿತ್ರಕಾರರಾಗಿ ಕೆಲಸಕ್ಕೆ ಸೇರಿ ಕಾಮನ್ ಮ್ಯಾನ್ ಪಾತ್ರಕ್ಕೆ ಜನ್ಮ ನೀಡಿದರು. ಅಂದಿನಿದ ಇವರು ಅಗಣಿತ ಕೃತಿಗಳನ್ನು ರಚಿಸಿದರು. ಮುಗ್ಧತೆ ತುಂಬಿರುತ್ತಿದ್ದ, ಮೃದು ಹಾಸ್ಯ ಬೀರುತ್ತಿದ್ದ ಇವರ ವ್ಯಂಗ್ಯ ಚಿತ್ರಗಳನ್ನು ಮೆಚ್ಚದ ಜನ ನಾಯಕರು ಇಲ್ಲ. ಅಂತೆಯೇ ಇವರನ್ನರಸಿ ಬಂದ ಪ್ರಶಸ್ತಿಗಳು ಅನೇಕ ಅವುಗಳಲ್ಲಿ ಮುಖ್ಯವಾದವುಗಳೆಂದರೆ "ರೋಮನ್ ಮಗೆಸಿಸೆ ಪ್ರಶಸ್ತಿ" 1984; "ಪದ್ಮ ಭೂಷಣ" 1984; "ಪದ್ಮ ವಿಭೂಷಣ" 2005.

ವಿಚಿತ್ರವೆಂದರೆ, ಯಾವದೊಂದೂ ಮಾತನ್ನಾಡದೆ ಸರಿ ಸುಮಾರು ಅರ್ಧ ಶತಮಾನ ದೇಶವನ್ನಾಳಿದ "ಶ್ರೀ ಸಾಮಾನ್ಯ" ಈ ಪಾತ್ರ ನಿಜಕ್ಕೂ ಶ್ಲಾಘನೀಯ. ಇಂತಹ ಪಾತ್ರದ ಜನಕ ಶ್ರೀ ಆರ್.ಕೆ. ಲಕ್ಷ್ಮಣ ನಮ್ಮನ್ನಗಲಿದ್ದು 26 ನೇ ಜನವರಿ 2015 ರಂದು. ಇತ್ತ ದೇಶದ ಜನತೆ ಜಗತ್ತಿನ ಬಲಿಷ್ಠ ರಾಷ್ಟ್ರದ ಆಮಂತ್ರಿತ ಅಮೆರಿಕಾದ ರಾಷ್ಟ್ರಪತಿ ಬರಾಕ ಒಬಾಮಾ ಜೊತೆಗೂಡಿ ಗಣರಾಜ್ಯೋತ್ಸವ ಆಚರಿಸುತ್ತಿದ್ದಾಗ "ಮಾತಿಲ್ಲದ" ಇದ್ದ ಕಾಮನ್ ಮ್ಯಾನ್ ಅವಧಿ ಮುಗಿಯಿತು ಎಂಬಂತೆ ಈ ಲೋಕದಿಂದ ದೂರ ಸರಿದದ್ದು ಆ ಆರ್.ಕೆ. ಲಕ್ಷ್ಮಣರು ನಮಗಿತ್ತ ಕೊನೆಯ ವ್ಯಂಗ್ಯ ಚಿತ್ರವೇ ಸರಿ.

ಸೂಕ್ಷ್ಮವಾಗಿ ಅವಲೋಕಿಸಿದರೆ, ಈ ಶ್ರೀ ಸಾಮಾನ್ಯನ ಮೂಲಕ ಇವರು ನಿತ್ಯವೂ ಹಾಕುತ್ತಿದ್ದ ಲಕ್ಷ್ಮಣ ರೇಖೆಗಳೂ ಕೂಡ ಅಂದು ರಾಮಾಯಣದ ಲಕ್ಷ್ಮಣನು ಸೀತಾ ಮಾತೆಗೆ ಹಾಕಿದ ಲಕ್ಷ್ಮಣ ರೇಖೆಗಿಂತ ಬಿನ್ನವಾಗಿರಲಿಲ್ಲ. ನಿತ್ಯವೂ ರಂಜಿಸಿದ ಲಕ್ಷ್ಮಣ ಇನ್ನಿಲ್ಲವಾಗಿದ್ದಾರೆ. 93 ವರುಷಗಳ ಸುದೀರ್ಘ ಕಲಾರಾಧನೆ ಗೈದ ಮಹಾನ್ ಕಲಾವಿದನಿಗೆ ಶ್ರದ್ಧಾಂಜಲಿ. ಅ

*ಚೆನ್ನು ಎಸ್ ಮಠದ*

# ಕಾಲಚಕ್ರದ ನಿರ್ಧಾರಗಳು

ಹೊಸ ಸಾಮ್ರಾಜ್ಯಗಳನ್ನು ಕಟ್ಟುವಾಗ ಯುದ್ಧಗಳು ಅನಿವಾರ್ಯ. ಮಹಾತ್ವಾಕಾಂಕ್ಷೆಯುಳ್ಳ ಸಾಮ್ರಾಟರು ತಾವು ಆಳುವ ಪ್ರದೇಶಗಳನ್ನು ವಿಸ್ತರಿಸುತ್ತಾ ಇನ್ನೊಂದು ದೇಶದ ಮೇಲೆ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಲು ಯುದ್ಧವನ್ನು ಸಾರುತ್ತಾರೆ. ಹೊಸ ಚಕ್ರಾಧಿಪತ್ಯದ ಹಿಂದೆ ಹಲವು ನೋವುಗಳ, ಅನೇಕ ಸಾವುಗಳ ಹಿನ್ನಲೆಯಿರುತ್ತದೆ. ಇಂತಹ ಇತಿಹಾಸದ ಅಡಿಪಾಯದಲ್ಲಿ ಹೊಸದೊಂದು ಪರಂಪರೆಯ ಸ್ಥಾಪನೆಯಾಗುತ್ತದೆ. ಆ ಸ್ಥಾಪಿತ ಪರಂಪರೆಯು ಇನ್ನೊಂದು ಹೊಸ ವಿಚಾರ ಮತ್ತು ಹೊಸ ಆಲೋಚನೆಗಳಿಗೆ ಅವಕಾಶ ನೀಡಿ ಮತ್ತೊಂದು ಹಂತದತ್ತ ಬೆಳೆಯದಿದ್ದರೆ ಹಿಂದೆ ಸ್ಥಾಪಿಸಿದ ಪರಂಪರೆಯು ಕುಸಿಯುತ್ತದೆ.

ಭಾರತದ ಪ್ರಜಾಸತ್ತೆಯ ಸೊಬಗು ಕೂಡಾ ಇದೇ ರೀತಿಯದ್ದು. ಅಧಿಕಾರದ ಬಾಹುಗಳು ಎಷ್ಟೇ ಶಕ್ತಿಯುತವಾಗಿರಲಿ ಆಳಿಸಿಕೊಂಡು ಹೋಗುವ ಪ್ರಜೆಗಳು ಎಂದೆಂದೂ ಎಚ್ಚರದಿಂದ ಇರುತ್ತಾರೆ. ದೇಶದ ಆಡಳಿತದಲ್ಲಿಯಾಗಲೀ, ಸಂಸ್ಥೆಗಳ ಆಡಳಿತದಲ್ಲಿ ಆಗಲೀ ಅಧಿಕಾರವನ್ನು ಹೊತ್ತವರು ಬಲಿಷ್ಠರಾಗಿ ಸಾಮಾನ್ಯರ ಆಶೋತ್ತರಗಳಿಗೆ ಪ್ರತಿಸ್ಪಂದಿಸದಿದ್ದರೆ ಅದಕ್ಕೆ ಸರಿಯಾದ ಪಾಠವನ್ನು ಕಲಿಸಿದ ಉದಾಹರಣೆಗಳು ಇತಿಹಾಸದ ಪುಟಪುಟಗಳಲ್ಲೂ ಇವೆ.

ದೆಹಲಿ ಕರ್ನಾಟಕ ಸಂಘದ ಇಂದಿನ ಅದ್ಭುತ ಪರಂಪರೆಯ ಹಿಂದೆಯೂ ಬಲಿಷ್ಟ ಅಧಿಕಾರದ, ಅದರ ವಿರುದ್ಧ ಹೋರಾಟಗಳ ಮತ್ತು ಜನ ಸಾಮಾನ್ಯರ ಆಶೋತ್ತರಗಳಿಗೆ ದೊರೆತ ವಿಜಯಗಳ ದೊಡ್ಡ ಇತಿಹಾಸವೇ ಇದೆ. ಸಂಘದ ಆರಂಭದ ದಶಕಗಳಲ್ಲಿ ಅದರ ಬೆಳವಣಿಗೆಗೆ ನೆಲವನ್ನು ದೊರಕಿಸಿ, ಸಂಘದ ಅಧಿಕಾರವನ್ನು ಬಹಳಷ್ಟು ವರ್ಷ ತಮ್ಮ ಕೈಯೊಳಗೆ ಇರಿಸಿಕೊಂಡು ಕನ್ನಡದ ಮೇಲಿನ ಅತ್ಯಾಭಿಮಾನವನ್ನು ತೋರಿಸಿದ ಹೆಮ್ಮೆಯ ಮಹಿಳೆ ಡಾ. ಸರೋಜಿನಿ ಮಹಿಷಿ ಅವರು ಇನ್ನಿಲ್ಲವಾಗಿದ್ದಾರೆ. ಕಾಲಚಕ್ರದಲ್ಲಿ ಅವರು ತೆಗೆದುಕೊಂಡ ನಿರ್ಧಾರಗಳಿಗೆ ಆಯಾಯ ಸಮಯದಲ್ಲಿ ಕಾಲವೇ ಉತ್ತರಿಸಿದೆ. ಅವರಿಲ್ಲವಾದಾಗ ಅವರ ಗುಣಾತ್ಮಕ ಕೊಡುಗೆಗಳು ದೆಹಲಿ ಕರ್ನಾಟಕ ಸಂಘವು ದೆಹಲಿಯ ಎಲ್ಲ ಕನ್ನಡಿಗರ ಸಂಘವಾಗಿ ಬೆಳೆಯಲು ನಮಗೆ ಮತ್ತು ಮುಂದಿನ ತಲೆಮಾರಿನವರಿಗೆ ಸ್ಫೂರ್ತಿದಾಯಕವಾಗಲಿ. ಅ

*ಬಾಲಕೃಷ್ಣ ನಾಯ್ಕ್ ಡಿ.*






### ಅಭಿಮತಕ್ಕಾಗಿ ಕಾತುರರಾಗಿ ಕಾಯುತ್ತಿರುತ್ತೇವೆ

ಅಭಿಮತದ ಅಭಿಮಾನದಿಂದ ಬರೆಯುತ್ತಿರುವ ನಾನು ಇದು ಎಲ್ಲರ ಮನಗೆದ್ದ ಅಭಿಮತ ಎಂದು ಅಭಿಮಾನದಿಂದ ಹೇಳುತ್ತಿದ್ದೇನೆ. ತಿಂಗಳು ಕಳೆಯುತ್ತಿದ್ದಂತೆ ಅಭಿಮತ ದ ಹಾದಿಯನ್ನೇ ಕಾಯುತ್ತಿರುತ್ತೇವೆ. ಯಾಕೆಂದರೆ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಯಾವ ರೀತಿ ಸಂಭ್ರಮದಿಂದ ನಡೆದವು ಎಂದು ತಿಳಿಯಲು ಕುತೂಹಲ ಇರುತ್ತದೆ. ಯಾವ ಮಹಾನ್ ವ್ಯಕ್ತಿಗಳ ಸನ್ಮಾನವಾಯಿತು, ಯಾರಿಂದ ಕಾರ್ಯಕ್ರಮಗಳು ನಡೆದವು ಎಂದು ತಿಳಿಯಲು ನಾವು ಕಾತುರರಾಗಿ ಇರುತ್ತವೆ.

ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಕಾರ್ಯಕ್ರಮಗಳ ಭಾವಚಿತ್ರಗಳು ನೋಡುತ್ತಿದ್ದರೆ ನಿಜವಾಗಿಯೂ ನಾವೂ ಸಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಅನಿಸುತ್ತದೆ. ಅಷ್ಟು ಚಂದವಾಗಿರುವ ಭಾವಚಿತ್ರಗಳು ಇರುವ ಅಭಿಮತ ಪತ್ರಿಕೆ ಬರುತ್ತಿದ್ದಂತೆ ನಾವು ಮಂತ್ರಮುಗ್ಧರಾಗುತ್ತೇವೆ. ಇಂತಹ ಅವಕಾಶ ಮಾಡಿಕೊಟ್ಟಂತಹ ಅಭಿಮತದ ಸಂಪಾದಕರಿಗೆ ಹಾಗೂ ಸಂಘದ ಸದಸ್ಯರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು. ಅ

***ನಂದಾ ರಾಘವೇಂದ್ರ***
ಧಾರವಾಡ

### ಮನಮೋಹಕ ಜನವರಿ ಸಂಚಿಕೆ

ಮಹಿಳಾ ಶಕ್ತಿಯ ಸಬಲೀಕರಣ-ಎಂದೆಂಬ ತಲೆ ಬರಹದೊಂದಿಗೆ ಭಾರತೀಯ ಪ್ರಖ್ಯಾತ ನೃತ್ಯ ಕಲಾವಿದೆ-ದೇವಿಕಾ ರಾವ್ ಅವರ ಸಾಕ್ಷಿಕೃತ ನೃತ್ಯ ಕಲೆಯ ಮುಖಚಿತ್ರದಿಂದ ಮನಸೆಳೆದ ಅಭಿಮತದ ಜನವರಿ ಸಂಚಿಕೆ ಅಂತರರಾಷ್ಟ್ರೀಯ ಕಲಾವಿದೆಯರನ್ನು ಅಪ್ಪಟ ಭಾರತೀಯ ಸಂಸ್ಕೃತಿಯ ಪ್ರತ್ಯೇಕತೆಯಿಂದ ನೋಡುವ ಕಣ್ಣುಗಳಿಗೆ ಮನಮೋಹಕತೆಯ ಲೇಪನ ನೀಡಿತು. ದೆಹಲಿ ಕರ್ನಾಟಕ ಸಂಘದ ಕಲಾವಿದ ಮನಸುಗಳಿಗೆಲ್ಲ ಮನತುಂಬಿದ ಅಭಿನಂದನೆಗಳು. ಅ

***ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ,***
ಕಾಸರಗೋಡು

### ನೂತನ ದಂಪತಿಗೆ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಬಿ.ಆರ್. ಮಹಾಲಿಂಗಪ್ಪ ಅವರ ಪುತ್ರಿ ಐಶ್ವರ್ಯ ಅವರ ವಿವಾಹವು ಶರತ್ ಎಂ.ಎಸ್. ಅವರೊಂದಿಗೆ ಇತ್ತೀಚೆಗೆ ನಡೆಯಿತು. ಹಿರಿಯ ಕಲಾವಿದೆ ಅನುರಾಧ ಧಾರೇಶ್ವರ್ ಅವರು ಸಂಘದಲ್ಲಿ ನಡೆದ ಕರ್ನಾಟಕ ಸಾಧಕಿಯರ ಉತ್ಸವ ಸಮಾರಂಭದ ಸಂದರ್ಭದಲ್ಲಿ ನೂತನ ದಂಪತಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಅ




# SAUJANYA PRINTING PRESS
## A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
February-2015, Vol. No.25, Issue No.5, Price Rs.1/- RNI Regn. No. 53405/91, DL-SW-1/4016/13-15
Printout Date : Feb. 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.




ಅಖಿಲ ಭಾರತ ಮಹಾಮೇಳದ ಸಮಾರೋಪ ಸಮಾರಂಭದಲ್ಲಿ ಗಣ್ಯರೊಂದಿಗೆ ಸಂಘದ ಕಾರ್ಯಕಾರಿ ಸಮಿತಿ



ಅಖಿಲ ಭಾರತ ಮಹಾಮೇಳದ ಸಂದರ್ಭದಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಗೌರವಿಸುತ್ತಿರುವುದು